4) 20m ಎತ್ತರದ ಕಟ್ಟಡವೊಂದರ ಮೇಲೆ ಸ್ಥಾಪಿಸಲಾದ ಪ್ರಸರಣಾ ಗೋಪುರದ ಮೇಲ್ತುದಿ ಮತ್ತು ಪಾದಗಳನ್ನು ನೆಲದ ಮೇಲಿನ ಒಂದು ಬಿಂದುವಿನಿಂದ ನೋಡಿದಾಗ ಉನ್ನತ ಕೋನಗಳು ಕ್ರಮವಾಗಿ $60^0$ ಮತ್ತು $45^0$ ಇವೆ. ಹಾಗಾದರೆ ಪ್ರಸರಣಾ ಗೋಪುರದ ಎತ್ತರವನ್ನು ಕಂಡುಹಿಡಿಯಿರಿ.

5) ಒಂದು ಗೋಪುರ ಮತ್ತು ಒಂದು ಕಟ್ಟಡ ಒಂದೇ ಸಮತಟ್ಟಾದ ನೆಲದ ಮೇಲೆ ನೇರವಾಗಿ ನಿಂತಿದೆ. ಗೋಪುರದ ಪಾದದಿಂದ ಕಟ್ಟಡದ ಮೇಲ್ತುದಿಯನ್ನು ನೋಡಿದಾಗ ಉನ್ನತ ಕೋನವು 300 ಮತ್ತು ಕಟ್ಟಡದ ಪಾದದಿಂದ ಗೋಪುರದ ಮೇಲ್ತುದಿಗೆ ಉನ್ನತಕೋನವು 600 ಇದೆ. ಗೋಪುರದ ಎತ್ತರ 50m ಇದ್ದರೆ ಕಟ್ಟಡದ ಎತ್ತರ ಕಂಡುಹಿಡಿಯಿರಿ

6) ಒಂದು ಗೋಪುರ ಮತ್ತು ಒಂದು ಕಟ್ಟಡ ಒಂದೇ ಸಮತಟ್ಟಾದ ನೆಲದ ಮೇಲೆ ನೇರವಾಗಿ ನಿಂತಿದೆ. ಕಟ್ಟಡದ ಎತ್ತರ 7 m ಆಗಿದೆ. ಕಟ್ಟಡದ ಮೇಲ್ತುದಿಯ ಒಂದು ಬಿಂದುವಿನಿಂದ ಗೋಪುರದ ಮೇಲ್ತುದಿಗೆ ಉನ್ನತ ಕೋನವು $60^0$ ಮತ್ತು ಅದರ ಪಾದಕ್ಕೆ ಅವನತ ಕೋನವು $45^0$ ಇದೆ. ಗೋಪುರದ ಎತ್ತರ ಕಂಡುಹಿಡಿಯಿರಿ.

## ನಾಲ್ಕು ಅಂಕದ ಪ್ರಶ್ನೆಗಳು

1) ಗೋಪುರದ ಪಾದದಿಂದ 4 ಮೀ. ಮತ್ತು 9 ಮೀ. ದೂರದಲ್ಲಿ ಗೋಪುರದ ಬದಿಗೆ ಒಂದೇ ಸರಳರೇಖೆಯ ಮೇಲಿರುವ ಎರಡು ಬಿಂದುಗಳಿಂದ ಗೋಪುರದ ಮೇಲ್ತುದಿಗೆ ಉಂಟಾಗುವ ಉನ್ನತ ಕೋನಗಳು ಪರಸ್ಪರ ಪೂರಕಗಳಾಗಿವೆ. ಹಾಗಾದರೆ ಗೋಪುರದ ಎತ್ತರವನ್ನು ಕಂಡುಹಿಡಿಯಿರಿ.

2) ಅಪೂರ್ಣವಾಗಿರುವ ಒಂದು ನೇರ ಕಟ್ಟಡದ ತುದಿಯು ಅದೇ ನೆಲದಲ್ಲಿನ ಕಟ್ಟಡದ ಬುಡದಿಂದ 100ಮೀ. ದೂರದಲ್ಲಿರುವ ಒಂದು ಬಿಂದುವಿನಿಂದ $45^0$ ಉನ್ನತಕೋನವನ್ನು ಉಂಟುಮಾಡುತ್ತದೆ. ಆ ಬಿಂದುವಿನಿಂದ ಕಟ್ಟಡದ ಗರಿಷ್ಠ ಎತ್ತರದ ತುದಿಗೆ $60^0$ ಉನ್ನತಕೋನವನ್ನು ಉಂಟುಮಾಡಿಸಲು, ಅಪೂರ್ಣಗೊಂಡಿರುವ ಕಟ್ಟಡವನ್ನು ಗರಿಷ್ಠ ಮಟ್ಟ ತಲುಪಲು ಇನ್ನು ಎಷ್ಟು ಎತ್ತರಕ್ಕೆ ಏರಿಸಬೇಕೆಂದು ಕಂಡು ಹಿಡಿಯಿರಿ.($\sqrt{3}$ =1.73)

3) ಒಂದು ಗೋಪುರ ಮತ್ತು ಕಂಬ ಒಂದೇ ಸಮತಟ್ಟಾದ ನೆಲದ ಮೇಲೆ ನೇರವಾಗಿ ನಿಂತಿವೆ. 60ಮೀ. ಎತ್ತರದ ಗೋಪುರದ ಮೇಲಿನಿಂದ ಕಂಬದ ಮೇಲ್ತುದಿ ಮತ್ತು ಅದರ ಪಾದಗಳನ್ನು ನೋಡಿದಾಗ ಉಂಟಾಗುವ ಅವನತ ಕೋನಗಳು ಕ್ರಮವಾಗಿ $30^0$ ಮತ್ತು $60^0$ ಆಗಿದೆ. ಆ ಕಂಬದ ಎತ್ತರವನ್ನು ಕಂಡುಹಿಡಿಯಿರಿ.

4) ಸಮತಟ್ಟಾದ ನೆಲಕ್ಕೆ ಸಮಾಂತರವಾಗಿ ಆಕಾಶದಲ್ಲಿ A ಬಿಂದುವಿನಿಂದ B ಬಿಂದುವಿನ ಮೂಲಕ ಹಾರುತ್ತಿರುವ ಒಂದು ವಿಮಾನವನ್ನು ನೆಲದ ಮೇಲಿನ ಒಂದು ಬಿಂದುವಿನಿಂದ ವೀಕ್ಷಿಸಿದಾಗ A ಬಿಂದುವಿಗೆ ಉಂಟಾದ ಉನ್ನತಕೋನವು $60^0$ ಆಗಿದೆ. 10 ಸೆಕೆಂಡುಗಳ ನಂತರ ಇದೇ ವಿಮಾನವು B ಗೆ ತಲುಪಿದಾಗ ಉಂಟಾಗುವ ಉನ್ನತ ಕೋನವು $30^0$ ಆಗಿರುತ್ತದೆ. ವಿಮಾನದ ವೇಗವು 648 ಕಿ.ಮೀ./ಗಂಟೆ ಆಗಿದ್ದಾಗ ನೆಲದ ಮೇಲಿನಿಂದ ಎಷ್ಟು ಎತ್ತರದಲ್ಲಿ ವಿಮಾನವು ಹಾರುತ್ತಿದೆ ಎಂಬುದನ್ನು ಕಂಡುಹಿಡಿಯಿರಿ. ($\sqrt{3}$ = 1.73 ಎಂದು ಉಪಯೋಗಿಸಿ)




05) ಚಿತ್ರದಲ್ಲಿ ಕೊಟ್ಟಿರುವಂತೆ ಒಂದು ನೇರ ಕಟ್ಟಡದ ಮೇಲ್ಭಾಗದ ತುದಿಯಿಂದ ನೆಲದ ಮೇಲಿನ ಒಂದು ಬಿಂದುವಿಗೆ ಉಂಟಾದ ಅವನತ ಕೋನವು $60^0$ ಇದೆ. ಕಟ್ಟಡದ ಬುಡದಿಂದ 50m ಎತ್ತರದಲ್ಲಿ ಇದೇ ಬಿಂದುವಿಗೆ ಉಂಟಾಗುವ ಅವನತ ಕೋನವು $30^0$ ಆಗಿದೆ. ಹಾಗಾದರೆ ಕಟ್ಟಡದ ಎತ್ತರವನ್ನು ಕಂಡುಹಿಡಿಯಿರಿ.



6) ನೆಲದ ಮೇಲೆ 10 ಅಡಿ ಎತ್ತರವಿರುವ ಒಂದು ಸಿಲಿಂಡರಿನ ಆಕೃತಿಯ ಕಟ್ಟಡದ ಮೇಲೆ ಶಂಕುವಿನಾಕೃತಿಯ ಗೋಪುರವನ್ನು ಜೋಡಿಸಿ ಚಿತ್ರದಲ್ಲಿ ತೋರಿಸಿರುವಂತೆ ಒಂದು ಕಟ್ಟಡವನ್ನು ನಿರ್ಮಿಸಲಾಗಿದೆ. ಅದೇ ನೆಲದ ಮೇಲಿನ ಒಂದು ಬಿಂದು 'P' ನಿಂದ ಸಿಲಿಂಡರಿನ ಮೇಲ್ಭಾಗದ ಅಂಚಿಗೆ ಉಂಟಾದ ಉನ್ನತಕೋನವು $30^0$ ಆಗಿದೆ. ಮತ್ತು ಇದೇ ಬಿಂದುವಿನಿಂದ ಗೋಪುರದ ಶೃಂಗಕ್ಕೆ ಉಂಟಾದ ಉನ್ನತಕೋನವು $45^0$ ಆಗಿದೆ. ಸಿಲಿಂಡರಿನ ವೃತ್ತಪಾದದ ಹೊರ ವ್ಯಾಸವು 9.4 ಅಡಿ ಇದ್ದರೆ ಆ ಶಂಕುವಿನಾಕೃತಿಯ ಗೋಪುರದ ಎತ್ತರ ಕಂಡುಹಿಡಿಯಿರಿ.




7) ಗೋಪುರದ ಪಾದದಿಂದ ಕಟ್ಟಡವೊಂದರ ಮೇಲ್ತುದಿಯನ್ನು ನೋಡಿದಾಗ ಉನ್ನತಕೋನವು 300 ಮತ್ತು ಕಟ್ಟಡದ ಪಾದದಿಂದ ಗೋಪುರದ ಮೇಲ್ತುದಿಗೆ ಉನ್ನತಕೋನವು 600 ಇದೆ. ಗೋಪುರ ಮತ್ತು ಕಟ್ಟಡಗಳು ಒಂದೇ ಸಮತಟ್ಟಾದ ನೆಲದ ಮೇಲಿವೆ. ಗೋಪುರದ ಎತ್ತರ 50m ಆದರೆ, ಕಟ್ಟಡದ ಎತ್ತರವನ್ನು ಕಂಡುಹಿಡಿಯಿರಿ.

8) ಸಮುದ್ರಮಟ್ಟದಿಂದ 75m ಎತ್ತರದಲ್ಲಿರುವ ದೀಪಸ್ತಂಭವೊಂದರ ಮೇಲಿನಿಂದ ಎರಡು ಹಡಗುಗಳನ್ನು ನೋಡಿದಾಗ, ಉಂಟಾದ ಅವನತಕೋನಗಳು $30^0$ ಮತ್ತು $45^0$ ಆಗಿವೆ. ದೀಪಸ್ತಂಭದ ಒಂದೇ ಪಾರ್ಶ್ವದಲ್ಲಿ ಒಂದು ಹಡಗಿನ ಹಿಂದೆ ಮತ್ತೊಂದಿದ್ದರೆ, ಆ ಎರಡು ಹಡಗುಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

9) ನೆಲದ ಮೇಲೆ ನೇರವಾಗಿ ನಿಂತಿರುವ ಒಂದು ಕಟ್ಟಡದ ತುದಿಯಿಂದ ನೆಲದ ಮೇಲಿನ ಒಂದು ಬಿಂದು 'C' ವನ್ನು ವೀಕ್ಷಿಸಿದಾಗ ಉಂಟಾಗುವ ಅವನತ ಕೋನವು $60°$ ಆಗಿದೆ. ಚಿತ್ರದಲ್ಲಿ ತೋರಿಸಿರುವಂತೆ, ಕಟ್ಟಡದ ಪಾದ (B)ದಿಂದ ನೆಲದ ಮೇಲಿನ 'C' ಬಿಂದುವಿನ ಮೂಲಕ ನೇರವಾಗಿ ಚಲಿಸಿ, ಒಂದು ಬಿಂದು (P)ವಿನಿಂದ ಕಟ್ಟಡದ ತುದಿಯನ್ನು ವೀಕ್ಷಿಸಿದಾಗ ಉನ್ನತ ಕೋನವು $30°$ ಆಗಬೇಕಾದರೆ, 'C' ಬಿಂದುವಿನಿಂದ 'P' ಬಿಂದುವಿಗೆ BC ಯ ಎರಡರಷ್ಟು ದೂರ ಚಲಿಸಬೇಕಾಗುತ್ತದೆ. ಎಂದು ತೋರಿಸಿ.




10) ಒಂದು ಗೋಪುರ ಮತ್ತು ಕಟ್ಟಡವು ಸಮತಟ್ಟಾದ ನೆಲದ ಮೆಲೆ ನೇರವಾಗಿ ನಿಂತಿವೆ. ನೆಲದ ಮೇಲಿನ ಒಂದು ಬಿಂದುವಿನಿಂದ ಹಾಗೂ ಕಟ್ಟಡದ ತುದಿಯಿಂದ ಗೋಪುರದ ತುದಿಗೆ ಉನ್ನತ ಕೋನಗಳು ಕ್ರಮವಾಗಿ $30^0$ ಮತ್ತು $60^0$ ಆಗಿವೆ. ಗೋಪುರದ ಪಾದದಿಂದ ಬಿಂದುವಿಗಿರುವ ದೂರವು $30\sqrt{3}$ m ಹಾಗೂ ಕಟ್ಟಡದ ಎತ್ತರವು 10 m ಆದರೆ, ಗೋಪುರ ಮತ್ತು ಕಟ್ಟಡದ ಪಾದಗಳ ನಡುವಿನ ದೂರ ಹಾಗೂ ಗೋಪುರ ಮತ್ತು ಕಟ್ಟಡದ ತುದಿಗಳ ನಡುವಿನ ದೂರವನ್ನು ಕಂಡುಹಿಡಿಯಿರಿ.

11) ಚಿತ್ರದಲ್ಲಿ ಸಮತಟ್ಟಾದ ನೆಲದ ಮೀಲಿರುವ ನೇರವಾದ ಕಂಬದ ತುದಿಯಿಂದ ನೆಲದ ಮೇಲಿನ ಒಂದು ಗೂಟಕ್ಕೆ 20m ಮೀಟರ್ ಉದ್ದವಿರುವಂತೆ ಒಂದು ಹಗ್ಗವನ್ನು ಬಿಗಿಯಾಗಿ ಕಟ್ಟಲಾಗಿದೆ. ಹಗ್ಗವು ನೆಲದೊಂದಿಗೆ $30°$ ಕೋನವನ್ನು ಉಂಟುಮಾಡಿದೆ. ಒಬ್ಬ ಸರ್ಕಸ್ ಕಲಾವಿದನು ಈ ಹಗ್ಗವನ್ನು ಹತ್ತಿ ಕಂಬದ ತುದಿಯನ್ನು ತಲುಪಿ, ಅಲ್ಲಿಂದ ಅವನು ಅದೇ ನೆಲದ ಮೇಲೆ ನೇರವಾಗಿ ನಿಂತಿರುವ ಮತ್ತೊಂದು ಕಂಬದ ತುದಿಯನ್ನು ವೀಕ್ಷಿಸಿದಾಗ ಉಂಟಾಗುವ ಉನ್ನತ ಕೋನವು $60°$ ಆಗಿರುತ್ತದೆ. ನೆಲದ ಮೇಲಿನ ಗೂಟದಿಂದ ದೊಡ್ಡ ಕಂಬದ ಪಾದಕ್ಕೆ ಇರುವ ದೂರವು 30m ಆದರೆ, ಈ ಕಂಬದ ಎತ್ತರವನ್ನು ಕಂಡುಹಿಡಿಯಿರಿ. ($\sqrt{3}$ = 1.73 ಎಂದು ತೆಗೆದುಕೊಳ್ಳಿ)




12) 1.2 m ಎತ್ತರದ ಹುಡುಗಿಯು ನೆಲದಿಂದ 88.2m ಎತ್ತರದಲ್ಲಿ ಒಂದು ಬಲೂನ್ ಕ್ಷಿತಿಜ ರೇಖೆಗೆ ಸಮಾಂತರವಾಗಿ ಗಾಳಿಯಲ್ಲಿ ತೇಲುತ್ತಿರುವುದನ್ನು ಗುರುತಿಸುತ್ತಾಳೆ. ಒಂದು ಸಮಯದಲ್ಲಿ ಹುಡುಗಿಯ ಕಣ್ಣಿನಿಂದ ಈ ಬಲೂನ್‌ಗೆ ಉಂಟಾದ ಉನ್ನತಕೋನವು 600. ಸ್ವಲ್ಪ ಸಮಯದ ನಂತರ ಉನ್ನತಕೋನವು 300 ಗೆ ಇಳಿಯುತ್ತದೆ. (ಚಿತ್ರ ನೋಡಿ) ಈ ಸಮಯದ ಅಂತರದಲ್ಲಿ ಬಲೂನ್ ಚಲಿಸಿದ ದೂರವನ್ನು ಕಂಡುಹಿಡಿಯಿರಿ.

13) ಒಬ್ಬ ವ್ಯಕ್ತಿಯು AD ಕಟ್ಟಡದ ಮೇಲೆ ‘A’ ಬಿಂದುವಿನಲ್ಲಿ ನಿಂತಿ
ಕಟ್ಟಡದ ಪಾದದಿಂದ ಹೊರಡುವ ನೇರವಾದ ರಸ್ತೆಯ ಮೇಲೆ ‘C’
ಬಿಂದುವಿನಲ್ಲಿರುವ ಕಾರನ್ನು ವ್ಯಕ್ತಿಯು ವೀಕ್ಷಿಸುತ್ತಾನೆ. ಕಾರು ಕಟ್ಟಡದ
500 m ದೂರವನ್ನು ಚಲಿಸಿ ‘B’ ಬಿಂದುವನ್ನು ತಲುಪಿದಾಗ ವ್ಯಕ್ತಿ
‘A’ ಬಿಂದುವಿನಿಂದ ಕಾರನ್ನು ವೀಕ್ಷಿಸುತ್ತಾನೆ. ಈ ಎರಡೂ ಸಂದರ್ಭ
ಉಂಟಾದ ಅವನತ ಕೋನಗಳು ಪರಸ್ಪರ ಪೂರಕ ಕೋನಗಳಾಗಿವೆ.
ಕಾರು ‘C’ ಬಿಂದುವಿನಿಂದ ‘D’ ಬಿಂದುವಿಗೆ 9 ನಿಮಿಷಗಳಲ್ಲಿ 100 ಮೀ/ನಿಮಿಷ ಜವದಲ್ಲಿ ತಲುಪಿದರೆ ಕಟ್ಟಡದ ಎತ್ತರವನ್ನು ಕಂಡುಹಿಡಿಯಿರಿ.




14) $\Delta$ ABC ಯಲ್ಲಿ AD $\perp$ BC ಆಗಿದೆ. $\angle$ABC = 60°, $\angle$ACB = 30° ಮತ್ತು BC = 36 cm ಆದರೆ, AB, AC ಮತ್ತು AD ಗಳ ಅಳತೆಗಳನ್ನು ಕಂಡುಹಿಡಿಯಿರಿ.




15) ಸಮುದ್ರ ತೀರದ ಮೇಲೆ ನೇರವಾಗಿ ನಿಂತ ಒಂದು ದೀಪಸ್ತಂಭದ (AB) ಎತ್ತರವು $10\sqrt{3}$ ಆಗಿದೆ. ದೀಪಸ್ತಂಭದ ಬುಡದಿಂದ 30m ದೂರದಲ್ಲಿ ಒಂದು ಗೋಪುರ (CE) ಹಾಗೂ 10m ದೂರದಲ್ಲಿ ಹಡಗೊಂದು (F) ನಿಂತಿದೆ. ದೀಪಸ್ತಂಭದ ತುದಿಯಿಂದ ಗೋಪುರದ ತುದಿಯನ್ನು ನೋಡಿದಾಗ ಉಂಟಾಗುವ ಉನ್ನತ ಕೋನವು 300 ಆದರೆ, ಗೋಪುರದ ಎತ್ತರವನ್ನು ಹಾಗೂ ದೀಪಸ್ತಂಭದತುದಿಯಿಂದ ಗೋಪುರದ ತುದಿಗಿರುವ ದೂರವನ್ನು (AE) ಕಂಡುಹಿಡಿಯಿರಿ. ದೀಪಸ್ತಂಭದ ತುದಿಯಿಂದ ಹಡಗಿಗೆ ಉಂಟಾಗಿರುವ ಅವನತ ಕೋನವನ್ನು ಕಂಡುಹಿಡಿಯಿರಿ.




16) ಚಿತ್ರದಲ್ಲಿ ಒಂದು ಸಮತಟ್ಟಾದ ನೆಲದ ಮೇಲೆ ಬೇರೆ ಬೇರೆ ಎತ್ತರಗಳನ್ನು ಹೊಂದಿರುವ AB ಮತ್ತು CD ಕಂಬಗಳು ನೇರವಾಗಿ ನಿಂತಿವೆ. ಈ ಎರಡೂ ಕಂಬಗಳ ಪಾದಗಳನ್ನು ಜೋಡಿಸುವ ರೇಖೆಯ ಮೇಲಿನ ಒಂದು ಬಿಂದು ‘P’ ನಿಂದ ಎರಡು ಕಂಬಗಳ ಮೇಲ್ತುದಿಗೆ ಉಂಟಾದ ಉನ್ನತ ಕೋನಗಳು ಪರಸ್ಪರ ಪೂರಕ ಕೋನಗಳಾಗಿವೆ. CD ಕಂಬದ ಉದ್ದ $20\sqrt{3}$ m ಮತ್ತು PD ಯ ಉದ್ದ 20 m ಗಳಾಗಿವೆ. BP = 10 m ಗಳಾದರೆ AB ಕಂಬದ ಉದ್ದ ಮತ್ತು ಕಂಬಗಳ ಮೇಲ್ತುದಿಗಳ ನಡುವಿನ ಉದ್ದ ACಯನ್ನು ಕಂಡುಹಿಡಿಯಿರಿ.




17) ‘A’ ಮತ್ತು ‘B’ ಎಂಬ ಎರಡು ಗಾಳಿಪಟಗಳು ಚಿತ್ರದಲ್ಲಿ ತೋರಿಸಿರುವಂತೆ ಒಂದರ ಕೆಳಗೆ ಮತ್ತೊಂದು ಇರುವಂತೆ ಸಮತಟ್ಟಾದ ನೆಲದ ಮೇಲ್ಭಾಗದಲ್ಲಿ ಹಾರುತ್ತಿವೆ. ‘A’ ಗಾಳಿಪಟವು ನೆಲದಿಂದ 300 ಮೀ ಎತ್ತರದಲ್ಲಿದೆ. ನೆಲದ ಮೇಲಿರುವ ‘P’ ಬಿಂದುವಿನಿಂದ ‘A’ ಮತ್ತು ‘B’ ಗಾಳಿಪಟಗಳನ್ನು ವೀಕ್ಷಿಸಿದಾಗಉಂಟಾಗುವ ಉನ್ನತ ಕೋನಗಳು ಕ್ರಮವಾಗಿ 60° ಮತ್ತು 30° ಆಗಿವೆ. ಹಾಗಾದರೆ ಗಾಳಿಪಟಗಳನಡುವಿನ ದೂರವನ್ನು ( AB ) ಕಂಡುಹಿಡಿಯಿರಿ. ಸ್ವಲ್ಪ ಸಮಯದ ನಂತರ ‘A’ ಗಾಳಿಪಟದದಾರವನ್ನು ಬಿಟ್ಟಾಗ ಅದು ನೆಲಕ್ಕೆ ಸಮಾಂತರವಾಗಿ ಚಲಿಸಿ ಆಕಾಶದಲ್ಲಿ ‘Al ’ ಬಿಂದುವನ್ನು ತಲುಪುತ್ತದೆ. P, B, Al ಬಿಂದುಗಳು ಒಂದೇ ಸರಳರೇಖೆಯಲ್ಲಿದ್ದಾಗ, ಗಾಳಿಪಟಗಳ ನಡುವಿನ ದೂರವನ್ನು (A1B) ಕಂಡುಹಿಡಿಯಿರಿ.




18) 300m ಅಂತರದಲ್ಲಿರುವ ಎರಡು ನೇರ ಗೋಪುರಗಳು ಸಮತಟ್ಟಾದ ನೆಲದ ಮೇಲೆ ನಿಂತಿವೆ. ನೆಲದಿಂದ ಮೇಲೆ ಹೆಲಿಕಾಪ್ಟರ್‌ನಲ್ಲಿರುವ ಸೈನಿಕನು ಎರಡೂ ಗೋಪುರದ ತುದಿಗಳನ್ನು ವೀಕ್ಷಿಸಿದಾಗ, ಅವುಗಳ ಅವನತ ಕೋನಗಳು ಚಿತ್ರದಲ್ಲಿರುವಂತೆ $60^0$ ಮತ್ತು $30^0$ ಎಂದು ಕಂಡುಕೊಳ್ಳುತ್ತಾನೆ. ದೊಡ್ಡ ಗೋಪುರದ ಉದ್ದವು 500 m ಮತ್ತು ಚಿಕ್ಕ ಗೋಪುರದ ಪಾದ ಮತ್ತು ಹೆಲಿಪಾಪ್ಟರ್ ನಿಂದ ನೆಲಕ್ಕಿರುವ ಲಂಬ ಎತ್ತರದ ಪಾದದ ನಡುವಿನ ದೂರವು $100\sqrt{3}$ m ಆದರೆ, ಚಿಕ್ಕ ಗೋಪುರದ ಎತ್ತರವನ್ನು ಕಂಡುಹಿಡಿಯಿರಿ.[ $\sqrt{3}$ = 1.73 ಎಂದು ತೆಗೆದುಕೊಳ್ಳಿ ]

*****************

# ಅಧ್ಯಾಯ – 10
# ವೃತ್ತಗಳು

**ವೃತ್ತ** : ಒಂದು ಸಮತಲದಲ್ಲಿ ಸ್ಥಿರ ಬಿಂದುವಿನಿಂದ ಸ್ಥಿರ ಅಂತರದಲ್ಲಿರುವ ಬಿಂದುಗಳ ಸಮೂಹ. ಸ್ಥಿರ ಬಿಂದುವನ್ನು ವೃತ್ತ ಕೇಂದ್ರ ಹಾಗೂ ಸ್ಥಿರ ದೂರವನ್ನು ತ್ರಿಜ್ಯ ಎನ್ನುವರು.
**ಜ್ಯಾ** : ವೃತ್ತದ ಮೇಲಿನ ಎರಡು ಬಿಂದುಗಳನ್ನು ಸೇರಿಸುವ ರೇಖೆಯನ್ನು ಜ್ಯಾ ಎನ್ನುವರು.
**ಕಂಸ** : ವೃತ್ತದ ಭಾಗವನ್ನು ಕಂಸ ಎನ್ನುವರು.
**ವೃತ್ತ ಖಂಡ** : ಜ್ಯಾ ಮತ್ತು ಕಂಸಗಳಿಂದ ಆವೃತವಾದ ವೃತ್ತಭಾಗವನ್ನು ವೃತ್ತ ಖಂಡ ಎನ್ನುವರು.
**ತ್ರಿಜ್ಯಾಂತರ ಖಂಡ** : ಎರಡು ತ್ರಿಜ್ಯಗಳು ಮತ್ತು ಕಂಸಗಳಿಂದ ಆವೃತವಾದ ವೃತ್ತಭಾಗವನ್ನು ತ್ರಿಜ್ಯಾಂತರ ಖಂಡ ಎನ್ನುವರು.
**ವೃತ್ತ ಛೇದಕ** : ವೃತ್ತವನ್ನು ಎರಡು ಬಿಂದುಗಳಲ್ಲಿ ಛೇದಿಸುವ ರೇಖೆಯನ್ನುವೃತ್ತ ಛೇದಕ ಎನ್ನುವರು.
ಚಿತ್ರದಲ್ಲಿ MN ವೃತ್ತ ಛೇದಕವಾಗಿದೆ.
**ವೃತ್ತ ಸ್ಪರ್ಶಕ** : ವೃತ್ತವನ್ನು ಒಂದೇ ಒಂದು ಬಿಂದುವಿನಲ್ಲಿ ಛೇದಿಸುವ ರೇಖೆಯನ್ನುವೃತ್ತ ಸ್ಪರ್ಶಕ ಎನ್ನುವರು.




ಚಿತ್ರದಲ್ಲಿ PQ ವೃತ್ತ ಸ್ಪರ್ಶಕವಾಗಿದೆ
* ವೃತ್ತದ ಒಂದು ಬಿಂದುವಿನಲ್ಲಿ ಒಂದೇ ಒಂದು ಸ್ಪರ್ಶಕ ಎಳೆಯಬಹುದು.
* ವೃತ್ತವು ಅಸಂಖ್ಯಾತ ಸ್ಪರ್ಶಕಗಳನ್ನು ಹೊಂದಿರುತ್ತದೆ.

**ಸ್ಪರ್ಶ ಬಿಂದು** : ಸ್ಪರ್ಶಕ ಮತ್ತು ವೃತ್ತಕ್ಕಿರುವ ಸಾಮಾನ್ಯ ಬಿಂದುವನ್ನು ಸ್ಪರ್ಶಬಿಂದು ಎನ್ನುವರು.
ಚಿತ್ರದಲ್ಲಿ 'A' ಸ್ಪರ್ಶಬಿಂದುವಾಗಿದೆ.
**ಪ್ರಮೇಯ** : " ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ"
**ಪ್ರಮೇಯ**: " ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತ್ತದೆ"

## ಬಹು ಆಯ್ಕೆ ಪ್ರಶ್ನೆಗಳು

1) ಒಂದು ವೃತ್ತದ ಎರಡು ಬಿಂದುಗಳ ಮೂಲಕ ಹಾದು ಹೋಗುವ ಸರಳ ರೇಖೆಯು
    A) ಜ್ಯಾ B) ವೃತ್ತ ಛೇದಕ C) ವೃತ್ತ ಸ್ಪರ್ಶಕ D) ತ್ರಿಜ್ಯ
2) ಒಂದು ಸರಳರೇಖೆಯು ವೃತ್ತದ ಒಂದೇ ಒಂದು ಬಿಂದುವಿನಲ್ಲಿ ಹಾದು ಹೋದರೆ ಆ ರೇಖೆಯು
    A) ವೃತ್ತ ಸ್ಪರ್ಶಕ B) ವೃತ್ತ ಛೇದಕ C) ತ್ರಿಜ್ಯ D) ಛೇದಕ
3) ಚಿತ್ರದಲ್ಲಿ BC ಯು




    A) ತ್ರಿಜ್ಯ B) ಜ್ಯಾ C) ವ್ಯಾಸ D) ಛೇದಕ
4) ಸ್ಪರ್ಶಕಗಳಿಗೆ ಸಂಬಂಧಿಸಿದಂತೆ ಈ ಕೆಳಗೆ ನಾಲ್ಕು ಹೇಳಿಕೆಗಳನ್ನು ನೀಡಲಾಗಿದೆ. ಇವುಗಳಲ್ಲಿ ತಪ್ಪಾಗಿರುವ ಹೇಳಿಕೆಯು
    A) ಒಂದು ಬಾಹ್ಯ ಬಿಂದುವಿನಿಂದ ಒಂದು ವೃತ್ತಕ್ಕೆ ನಿರ್ದಿಷ್ಟವಾಗಿ ಎರಡು ಸ್ಪರ್ಶಕಗಳನ್ನು ಎಳೆಯಬಹುದು.
    B) ವೃತ್ತದ ಮೇಲಿನ ಒಂದು ಬಿಂದುವಿನಿಂದ ವೃತ್ತಕ್ಕೆ ಒಂದೇ ಒಂದು ಸ್ಪರ್ಶಕವನ್ನು ಮಾತ್ರ ಎಳೆಯಬಹುದು.
    C) ವೃತ್ತದ ಒಳಗಿನ ಬಿಂದುವಿನ ಮೂಲಕ ವೃತ್ತಕ್ಕೆ ಎರಡು ಸ್ಪರ್ಶಕಗಳನ್ನು ಮಾತ್ರ ಎಳೆಯಬಹುದು.
    D) ಬಾಹ್ಯ ಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳ ಉದ್ದವು ಸಮನಾಗಿರುತದ್ತೆ.
5) ಒಂದು ವೃತ್ತಕ್ಕೆ ಅದರ ಹೊರಗಿನ ಬಿಂದುವಿನಿಂದ ಎಳೆದ ಸ್ಪರ್ಶಕಗಳ ಉದ್ದವು
    A) ಅಸಮವಾಗಿರುತ್ತದೆ. B) ಸಮವಾಗಿರುತ್ತದೆ.C) ವೃತ್ತದ ತ್ರಿಜ್ಯಕ್ಕೆ ಸಮನಾಗಿರುತ್ತದೆ. D) ವೃತ್ತದ ವ್ಯಾಸಕ್ಕೆ ಸಮನಾಗಿರುತ್ತದೆ.
6) ಈ ಕೆಳಗಿನ ಹೇಳಿಕೆಗಳಲ್ಲಿ 'ತಪ್ಪು ಹೇಳಿಕೆಯನ್ನು' ಗುರುತಿಸಿ. ಏಜಜ–2021
    A) ವೃತ್ತಕ್ಕೆ ಎಳೆದ ಸ್ಪರ್ಶಕವು ವೃತ್ತವನ್ನು ಒಂದೇ ಒಂದು ಬಿಂದುವಿನಲ್ಲಿ ಸ್ಪರ್ಶಿಸುತದ್ತ'.
    B) ವೃತ್ತಕ್ಕೆ ಒಂದು ಸರಳರೇಖೆಯನ್ನು ಎಳೆದಾಗ ಅದು ಯಾವಾಗಲೂ ವೃತ್ತದ ಒಂದೇ ಒಂದು ಬಿಂದುವಿನಿಂದ ಹಾದು ಹೋಗುತ್ತದೆ.
    C) ವೃತ್ತಕ್ಕೆ ಒಂದು ಸರಳರೇಖೆಯನ್ನು ಎಳೆದಾಗ ಅದು ವೃತ್ತವನ್ನು ಸ್ಪರ್ಶಿಸುವ ಬಿಂದುವನ್ನು ಸ್ಪರ್ಶಬಿಂದು ಎಂದು ಕರೆಯುತ್ತೇವೆ.
    D) ಸ್ಪರ್ಶಬಿಂದುವಿನಿಂದ ವೃತ್ತಕ್ಕೆ ಎಳೆದ ತ್ರಿಜ್ಯವು ಸ್ಪರ್ಶರೇಖೆಗೆ ಲಂಬವಾಗಿರುತ್ತದೆ.
7) 'O' ಕೇಂದ್ರವುಳ್ಳ ವೃತ್ತದಲ್ಲಿ ವೃತ್ತ ಛೇದಕ ರೇಖೆಯು



    A) PQ B) XY C) QR D) AB
8) ಕೊಟ್ಟಿರುವ ಚಿತ್ರದಲ್ಲಿ 'ಜ್ಯಾ'ವು

A) AB  B) CD  C) MN  D) OK

9) ಒಂದು ವೃತ್ತದ ಸ್ಪರ್ಶಕದ ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯ ಮತ್ತು ಸ್ಪರ್ಶಕದ ನಡುವಿನ ಕೋನವು

A) $30^0$  B) $60^0$  C) $90^0$  D) $180^0$

10) 'O' ಕೇಂದ್ರವುಳ್ಳ ವೃತ್ತದಲ್ಲಿ AP ಮತ್ತು BP ಎರಡು ತ್ರಿಜ್ಯಗಳು.
∟APB = $30^0$ ಆದರೆ ∟OAP ಯ ಅಳತೆ,



A) $30^0$  B) $120^0$ C) $60^0$  D) $90^0$

11) ಒಂದು ವೃತ್ತದಲ್ಲಿ, ಎರಡು ತ್ರಿಜ್ಯಗಳ ನಡುವಿನ ಕೋನ $130^0$ ತ್ರಿಜ್ಯಗಳ ಅಂತ್ಯ ಬಿಂದುಗಳಿಂದ ಎಳೆದ ಎರಡು ಸ್ಪರ್ಶಕಗಳ ನಡುವಿನ ಕೋನ

A) $65^0$  B) $40^0$  C) $70^0$  D) $50^0$

12) 3 cm ತ್ರಿಜ್ಯವಿರುವ ವೃತ್ತದಲ್ಲಿ ಎರಡು ಸಮಾಂತರ ಸ್ಪರ್ಶಕಗಳ ನಡುವಿನ ದೂರವು

A) 3 cm  B) 1.5 cm  C) 9 cm  D) 6 cm

13) 6 ಸೆಂ.ಮೀ ತ್ರಿಜ್ಯವಿರುವ ವೃತ್ತವೊಂದಕ್ಕೆ AB ಮತ್ತು ಅಃ ಗಳು ಎರಡು ಸಮಾಂತರ ಸ್ಪರ್ಶಕಗಳಾಗಿವೆ.
ಹಾಗಾದರೆ ಸ್ಪರ್ಶಕಗಳ ನಡುವಿನ ದೂರವು

A) 10cm  B) 12 cm  C) 13 cm  D) 15 cm

14) ಚಿತ್ರದಲ್ಲಿ '$O$' ಕೇಂದ್ರವುಳ್ಳ ವೃತ್ತಕ್ಕೆ $PA$, $PC$ ಮತ್ತು $CD$ ಗಳು ಸ್ಪರ್ಶಕಗಳಾಗಿವೆ.
$AP$ = 3 ಸೆಂ.ಮೀ., $CD$ = 5 ಸೆಂ.ಮೀ. ಆದಾಗ $PC$ಯ ಉದ್ದವು



A) 3 ಸೆಂ.ಮೀ.  B) 5 ಸೆಂ.ಮೀ.  C) 8 ಸೆಂ.ಮೀ.  D) 2 ಸೆಂ.ಮೀ.

15) ಚಿತ್ರದಲ್ಲಿ $O$ ಕೇಂದ್ರವುಳ್ಳ ವೃತ್ತಕ್ಕೆ $TP$ ಮತ್ತು $TQ$ ಗಳು
ಸ್ಪರ್ಶಕಗಳಾದರೆ $\angle PTQ$ ದ ಅಳತೆ



A) $90^0$  B) $110^0$  C) $70^0$  D) $40^0$

16) ಒಂದು ವೃತ್ತವನ್ನು ಎರಡು ಬಿಂದುಗಳಲ್ಲಿ ಛೇದಿಸುವ ಸರಳ
ರೇಖೆಯು ಇದಾಗಿದೆ :

A) ಛೇದಕ  B) ಸ್ಪರ್ಶಕ  C) ತ್ರಿಜ್ಯ  D) ಲಂಬಕ

17) 'O' ಕೇಂದ್ರವಿರುವ ವೃತ್ತಕ್ಕೆ PA ಮತ್ತು PB ಎಂಬ ಎರಡು
ಸ್ಪರ್ಶಕಗಳನ್ನು ಚಿತ್ರದಲ್ಲಿ ತೋರಿಸಿರುವಂತೆ ಎಳೆಯಲಾಗಿದೆ. PA= 5cm
ಮತ್ತು ∠APB=$60^0$ ಆದಾಗ AB ಜ್ಯಾದ ಉದ್ದವು




A) $5\sqrt{2}$ cm  B) $5\sqrt{3}$ cm  C) 5cm  D) 5.2cm

18) 'O' ಕೇಂದ್ರವುಳ್ಳ ವೃತ್ತಕ್ಕೆ ಬಾಹ್ಯ ಬಿಂದು A ನಿಂದ ಸ್ಪರ್ಶಕವನ್ನು ಎಳೆಯಲಾಗಿದೆ. AB = 24cm
ಮತ್ತು OA=25cm ಆದಾಗ ವೃತ್ತದ ತ್ರಿಜ್ಯದ ಉದ್ದವು




A) 12cm  B) 7cm  C) 15cm  D) 16cm

19) 'O' ಕೇಂದ್ರವುಳ್ಳ ವೃತ್ತಕ್ಕೆ ACB, AE ಮತ್ತು BD ಗಳು
ಸ್ಪರ್ಶಕಗಳಾಗಿವೆ. AB=12cm ಮತ್ತು AE=3cm ಆದರೆ
BD ಯ ಉದ್ದ



A) 6 cm  B) 3 cm  C) 8 cm  D) 9 cm

20) ಚಿತ್ರದಲ್ಲಿ PA, PBC ಮತ್ತು CD ಗಳು 'O' ಕೇಂದ್ರವುಳ್ಳ ವೃತ್ತಕ್ಕೆ
ಎಳೆದ ಸ್ಪರ್ಶಕಗಳಾಗಿವೆ. PC = 8 cm ಮತ್ತು AP = 3 cm ಆದಾಗ,
CB ಸ್ಪರ್ಶಕದ ಉದ್ದ ಎಸ್ಎಸ್ಎಲ್‌ಸಿ–2021



A) 5 cm  B) 3 cm  C) 8 cm  D) 13 cm

## ಒಂದು ಅಂಕದ ಪ್ರಶ್ನೆಗಳು

1) ಒಂದು ವೃತ್ತದ ಮೇಲಿನ ಯಾವುದೇ ಒಂದು ಬಿಂದುವಿಗೆ ಎಳೆಯಬಹುದಾದ ಸ್ಪರ್ಶಕಗಳ ಸಂಖ್ಯೆ ಬರೆಯಿರಿ

2) ಚಿತ್ರದಲ್ಲಿ AB ಮತ್ತು AC ಗಳು O ಕೇಂದ್ರವಿರುವ B
ವೃತ್ತಕ್ಕೆ A ಬಿಂದುವಿನಿಂದ ಎಳೆದ ಎರಡು ಸ್ಪರ್ಶಕಗಳು.
∟BOC = $130^0$ ಆದರೆ, ∟BAC ಯನ್ನು ಕಂಡುಹಿಡಿಯಿರಿ.




3) ಚಿತ್ರದಲ್ಲಿ ತೋರಿಸುವಂತೆ ವೃತ್ತದ ಸ್ಪರ್ಶಕವನ್ನು ಕಂಡುಹಿಡಿದು
ಅದರ ಹೆಸರನ್ನು ಬರೆಯಿರಿ.



4) ಚಿತ್ರದಲ್ಲಿರುವಂತೆ 'O' ಕೇಂದ್ರವಿರುವ ವೃತ್ತದಲ್ಲಿ AC ಒಂದು
ವ್ಯಾಸವಾಗಿದೆ, ∟ACB = $50^0$ ಆದರೆ ∟BAC ಯ ಅಳತೆಯನ್ನು

ಕಂಡುಹಿಡಿಯಿರಿ.



5) ಪಕ್ಕದಲ್ಲಿರುವ ಚಿತ್ರದಲ್ಲಿ AP = 3cm ಮತ್ತು PC = 8cm D
ಆದಾಗ CD ಸ್ಪರ್ಶಕದ ಉದ್ದವನ್ನು ಕಂಡುಹಿಡಿಯಿರಿ.




6) ಚಿತ್ರದಲ್ಲಿ 'O' ಕೇಂದ್ರವಿರುವ ವೃತ್ತಕ್ಕೆ AB ಯು ಸ್ಪರ್ಶಕವಾಗಿದೆ. 'P'ಯು ಸ್ಪರ್ಶಬಿಂದುವಾಗಿದೆ.
∟OAP = $50_0$ ಆದಾಗ, ∟AOP ಯನ್ನು ಕಂಡುಹಿಡಿಯಿರಿ.




7) ಕೊಟ್ಟಿರುವ ಚಿತ್ರದಲ್ಲಿ, ∟AOB = 2 ∟APB ಆದರೆ, ∟APB ಯನ್ನು ಕಂಡುಹಿಡಿಯಿರಿ.




8) ಚಿತ್ರದಲ್ಲಿ 'O' ವೃತ್ತ ಕೇಂದ್ರ. OA ತ್ರಿಜ್ಯ ಮತ್ತುAP ಸ್ಪರ್ಶಕ. ∟OPA = $40_0$,
ಆದರೆ∟AOP ಯನ್ನುಕಂಡುಹಿಡಿಯಿರಿ

<u>ಎರಡು ಅಂಕದ ಪ್ರಶ್ನೆಗಳು</u>



1) ಚಿತ್ರದಲ್ಲಿ AP, AX ಮತ್ತು AY ಗಳು ವೃತ್ತಗಳಿಗೆ ಎಳೆದ ಸ್ಪರ್ಶಕಗಳಾಗಿವೆ. AY = AX ಎಂದು ಸಾಧಿಸಿ.



2) ಚಿತ್ರದಲ್ಲಿ ತೋರಿಸಿರುವಂತೆ '$O$'ವೃತ್ತಕೇಂ ಒಂದು ವೃತ್ತಕ್ಕೆ $PQ$ ಮತ್ತು $RS$ ಸಮಾಂತರ ಸ್ಪರ್ಶಕಗಳಾಗಿವೆ ಮತ್ತು ಸ್ಪರ್ಶಬಿಂದು ಮತ್ತೊಂದು ಸ್ಪರ್ಶಕ $AB$ ಯು PQ ಬಿಂದುವಿನಲ್ಲಿ ಮತ್ತು $RS$ ನ್ನು $B$ ಬಿಂದುವಿನಲ್ಲಿ ಛೇದಿಸುತದ್ದೆ. ಹಾಗಾದರೆ $\angle AOB = 90°$ ಎಂದು ಸಾಧಿಸಿ.

3) ಎರಡು ಏಕಕೇಂದ್ರಿಯ ವೃತ್ತಗಳ ತ್ರಿಜ್ಯಗಳು 5 ಸೆಂ.ಮೀ ಮತ್ತು 3 ಸೆಂ.ಮೀ. ಇರುವಂತೆ ರಚಿಸಿದೆ. ಚಿಕ್ಕ ವೃತ್ತಕ್ಕೆ ಸ್ಪರ್ಶಿಸುವಂತೆ ಎಳೆದ ದೊಡ್ಡ ವೃತ್ತದ ಜ್ಯಾದ ಉದ್ದವನ್ನು ಕಂಡುಹಿಡಿಯಿರಿ.
4) `O' ವೃತ್ತಕೇಂದ್ರವನ್ನು ಹೊಂದಿರುವ ವೃತ್ತಕ್ಕೆ ಬಾಹ್ಯಬಿಂದು T ಯಿಂದ TP ಮತ್ತು TQ ಎರಡು ಸ್ಪರ್ಶಕಗಳನ್ನು ಎಳೆದಿದೆ. ∠PTQ = 2∠OPQ ಎಂದು ಸಾಧಿಸಿರಿ.

## <u>ಮೂರು ಅಂಕದ ಪ್ರಶ್ನೇಗಳು</u>

1) "ವೃತ್ತದ ಮೇಲಿನ ಯಾವುದೇ ಬಿಂದುವಿನಲ್ಲಿ ಎಳೆದ ಸ್ಪರ್ಶಕವು, ಸ್ಪರ್ಶಬಿಂದುವಿನಲ್ಲಿ ಎಳೆದ ತ್ರಿಜ್ಯಕ್ಕೆ ಲಂಬವಾಗಿರುತ್ತದೆ" ಎಂದು ಸಾಧಿಸಿ. (ಪ್ರಮೇಯ)
2) ಬಾಹ್ಯಬಿಂದುವಿನಿಂದ ವೃತ್ತಕ್ಕೆ ಎಳೆದ ಸ್ಪರ್ಶಕಗಳು ಸಮನಾಗಿರುತ್ತವೆ ಎಂದು ಸಾಧಿಸಿ. (ಪ್ರಮೇಯ)

**************

# ಅಧ್ಯಾಯ – 11

## ವೃತ್ತಗಳಿಗೆ ಸಂಬಂಧಿಸಿದ ವಿಸ್ತೀರ್ಣಗಳು

1. ವೃತ್ತದ ಪರಿಧಿ = $C = 2\pi r$
2. ವೃತ್ತದ ವಿಸ್ತೀರ್ಣ = $A = \pi r^2$
3. ಅರ್ಧವೃತ್ತದ ವಿಸ್ತೀರ್ಣ = $A = \frac{1}{2}\pi r^2$
4. ಚತುರ್ಥಕ ಭಾಗದ ವಿಸ್ತೀರ್ಣ = $A = \frac{1}{4}\pi r^2$
5. ಚೌಕದ ವಿಸ್ತೀರ್ಣ = $A = a^2$
6. ಆಯತದ ವಿಸ್ತೀರ್ಣ = $A = l x b$
7. ತ್ರಿಭುಜದ ವಿಸ್ತೀರ್ಣ = $A = \frac{1}{2} bh$
8. ಸಮಬಾಹು ತ್ರಿಭುಜದ ವಿಸ್ತೀರ್ಣ = $A = \frac{\sqrt{3}}{4} a^2$
9. ತ್ರಿಜ್ಯ '$r$' ಆಗಿರುವ ಒಂದು ವೃತ್ತದ ಕೇಂದ್ರದಲ್ಲಿ ಉಂಟಾದ ಕೋನವು '$\theta$' ಆದಾಗ, ತ್ರಿಜ್ಯಾಂತರ ಖಂಡದ ಕಂಸದ ಉದ್ದ = $2\pi r$
10. ತ್ರಿಜ್ಯ '$r$' ಆಗಿರುವ ಒಂದು ವೃತ್ತದ ಕೇಂದ್ರದಲ್ಲಿ ಉಂಟಾದ ಕೋನವು '$\theta$' ಆದಾಗ, ತ್ರಿಜ್ಯಾಂತರ ಖಂಡದ ವಿಸ್ತೀರ್ಣ $= \frac{\theta}{360}\pi r^2$

ಬಹು ಆಯ್ಕೆ ಪ್ರಶ್ನೆಗಳು

1) ಒಂದು ವೃತ್ತದ ವಿಸ್ತೀರ್ಣವು $49\pi$ ಚದರ ಮಾನಗಳು ಆದರೆ, ಅದರ ಪರಿಧಿಯು

A) $7\pi$ ಮಾನಗಳು B) $9\pi$ ಮಾನಗಳು C) $14\pi$ ಮಾನಗಳು D) $49\pi$ ಮಾನಗಳು

2) '$r$' ತ್ರಿಜ್ಯವನ್ನು ಹೊಂದಿರುವ 2 ಸರ್ವಸಮ ವೃತ್ತಗಳ ವಿಸ್ತೀರ್ಣವು

A) $2\pi r^2$ B) 2 C) $\frac{1}{2}\pi r^2$ D) $\pi r^2$

3) ತ್ರಿಜ್ಯ '$r$' ಆಗಿರುವ ಒಂದು ವೃತ್ತದಲ್ಲಿ '$\theta$' ಕೋನವನ್ನು ಹೊಂದಿರುವ ತ್ರಿಜ್ಯಾಂತರ ಖಂಡದ ಕಂಸದ ಉದ್ದ

A) $\frac{\theta}{180}\pi r$ B) $\frac{\theta}{360}2\pi r$ C) $\frac{\theta}{180}\pi r^2$ D) $\frac{\theta}{360}\pi r^2$

4) 'r' ತ್ರಿಜ್ಯವಿರುವ ವೃತ್ತದಲ್ಲಿ 'p' (ಡಿಗ್ರಿಗಳಲ್ಲಿ) ಕೋನವನ್ನು ಹೊಂದಿರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣವು

A) $\frac{p}{180}\pi r$ B) $\frac{p}{360}2\pi r$ C) $\frac{p}{180}\pi r^2$ D) $\frac{p}{360}\pi r^2$

5) ವೃತ್ತದ ವ್ಯಾಸವು 14 cm ಆಗಿದ್ದಾಗ, ಅದರ ಪರಿಧಿಯು

A) 28 cm B) 44 cm C) 56 cm D) 88 cm

## ಒಂದು ಅಂಕದ ಪ್ರಶ್ನೆಗಳು :

1) ವೃತ್ತಕೇಂದ್ರದಲ್ಲಿ ಉಂಟಾದ ಕೋನವು '$\theta$' ಡಿಗ್ರಿಯಾದಾಗ ತ್ರಿಜ್ಯಾಂತರ ಖಂಡದ ವಿಸ್ತೀರ್ಣವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

2) ಒಂದು ವೃತ್ತದ ವ್ಯಾಸವು 7cm ಆದರೆ, ಅರ್ಧವೃತ್ತದ ಕಂಸದ ಉದ್ದವನ್ನು ಕಂಡುಹಿಡಿಯಿರಿ.

## ಎರಡು ಅಂಕದ ಪ್ರಶ್ನೆಗಳು

1) 21 ಸೆಂ.ಮೀ. ತ್ರಿಜ್ಯವಿರುವ ಒಂದು ವೃತದಲ್ಲಿ ಒಂದು ವೃತ್ತಕಂಸ ವೃತ್ತಕೇಂದ್ರದಲ್ಲಿ $60^0$ ಕೋನವನ್ನು ಉಂಟು ಮಾಡಿದರೆ ಕಂಸದ ಉದ್ದವನ್ನು ಕಂಡುಹಿಡಿಯಿರಿ.

2) ತ್ರಿಜ್ಯ 4 ಸೆಂ.ಮೀ. ಮತ್ತು ಕೋನವು $45°$ ಇರುವ ತ್ರಿಜ್ಯಾಂತರ ಖಂಡದ ವಿಸ್ತೀರ್ಣವನ್ನು ಕಂಡುಹಿಡಿಯಿರಿ. ($\pi$= 3.14 ಎಂದು ಬಳಸಿ).

3) ಎರಡು ವೃತ್ತಗಳ ವಿಸ್ತೀರ್ಣಗಳು ಕ್ರಮವಾಗಿ 92 ಚದರ ಸೆಂ.ಮೀ ಮತ್ತು 62 ಚದರ ಸೆಂ.ಮೀ. ಆಗಿದೆ. ಈ ಎರಡು ವೃತ್ತಗಳ ವಿಸ್ತೀರ್ಣದ ಮೊತ್ತಕ್ಕೆ ಸಮನಾದ ವಿಸ್ತೀರ್ಣವನ್ನು ಹೊಂದಿರುವ ವೃತ್ತದ ತ್ರಿಜ್ಯವನ್ನು ಕಂಡುಹಿಡಿಯಿರಿ.

4) ಕೊಟ್ಟಿರುವ ಚಿತ್ರದಲ್ಲಿ $AB = 36\ cm$ ಆಗಿದೆ. AB ಯ ಮಧ್ಯಬಿಂದು. AB ಮತ್ತು BM ಗಳು ವ್ಯಾಸವಾಗಿರುವಂತೆ ಮೂರು ಅರ್ಧ ವೃತ್ತಗಳನ್ನು ರಚಿಸಲಾಗಿದೆ. ಹಾಗಾದರೆ ಛಾಯೆಗೊಳಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




## ಮೂರು ಅಂಕದ ಪ್ರಶ್ನೆಗಳು




1) ಲೋಹದ ತಂತಿಯ ಅಂಚುಗಳ ನಡುವೆ ಬಟ್ಟೆಯನ್ನು ಇಟ್ಟು ತಯಾರಿಸಲಾದ ಕೈ ಬೀಸಣಿಗೆಯು ಚಿತ್ರದಲ್ಲಿ ತೋರಿಸಿದಂತೆ ವೃತ್ತದ ತ್ರಿಜ್ಯಾಂತರ ಖಂಡದ ಆಕಾರದಲ್ಲಿದ್ದು ಅದರ ತ್ರಿಜ್ಯವು 21 ಸೆಂ.ಮೀ. ಮತ್ತು ಕೋನ ಆಗಿದೆ. ಬೀಸಣಿಗೆಗೆ ಉಪಯೋಗಿಸಿರುವ ಬಟ್ಟೆಯ $120^0$ ವಿಸ್ತೀರ್ಣ ಮತ್ತು ತಂತಿಯ ಉದ್ದವನ್ನು ಕಂಡುಹಿಡಿಯಿರಿ.



2) ತ್ರಿಜ್ಯಗಳು 21 ಸೆಂ.ಮೀ. ಮತ್ತು 7 ಸೆಂ.ಮೀ. ಆಗಿರುವ O' ಕೇಂದ್ರವುಳ್ಳ ಎರಡು ಏಕಕೇಂದ್ರೀಯ ವೃತ್ತಗಳ ಕಂಸಗಳು ಕ್ರಮವಾಗಿ AB ಮತ್ತು CD ಆಗಿವೆ. ಚಿತ್ರದಲ್ಲಿ ತೋರಿಸಿರುವಂತೆ $\angle AOB = 30_0$ ಆದಾಗ ಛಾಯೆಗೊಳಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




3) ಚಿತ್ರದಲ್ಲಿ ತೋರಿಸಿರುವಂತೆ 21cm ಕೋನವನ್ನುಂಟು ಮಾಡುತ್ತದೆ. ಹಾಗಾದರೆ

i) ಕಂಸ AC ಯ ಉದ್ದ

ii) ತ್ರಿಜ್ಯಾಂತರ ಖಂಡ OAC ಯ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




4) ಕೊಟ್ಟಿರುವ ಚಿತ್ರದಲ್ಲಿ AXB ಮತ್ತು CYD ಗಳು 'O' ಕೇಂದ್ರವಿರುವ ಎರಡು ಏಕಕೇಂದ್ರೀಯ ವೃತ್ತಗಳ ಕಂಸಗಳಾಗಿವೆ. AXB ಕಂಸದ ಉದ್ದವು 11cm ಇದೆ. $OC = 7cm$ ಮತ್ತು $\angle AOB = 30^0$ ಆದರೆ, ಛಾಯೀಕರಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




5) ಚಿತ್ರದಲ್ಲಿ 'O' ಕೇಂದ್ರವಾಗುಳ್ಳ ವೃತ್ತದ ಕಂಸ AB ಯ ಉದ್ದ 11cm ಮತ್ತು $OP = 4cm$ ಆದರೆ, ಛಾಯೆಗೊಳಿಸಿದ ಭಾಗದ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




6) ಚಿತ್ರದಲ್ಲಿ OAPB ಯು ಒಂದು ವೃತ್ತ ಚತುರ್ಥಕ ಮತ್ತು OAPಯು ತ್ರಿಜ್ಯಾಂತರ ಖಂಡವಾಗಿದೆ. $\angle AOP = 30^0$ ಮತ್ತು ಛಾಯೆಗೊಳಿಸಿದ ಭಾಗದ ವಿಸ್ತೀರ್ಣವು $462\ cm_2$ ಆದರೆ, PB ಕಂಸದ ಉದ್ದವನ್ನು ಕಂಡುಹಿಡಿಯಿರಿ.

7) ತ್ರಿಜ್ಯಾಂತರ ಖಂಡದ ವಿಸ್ತೀರ್ಣ $231\ cm_2$ ಮತ್ತು ಅದರ ಕಂಸಯ ಉದ್ದವು 22cm, ಆದರೆ ಆ ತ್ರಿಜ್ಯಾಂತರ ಖಂಡದ ತ್ರಿಜ್ಯವನ್ನು ಕಂಡುಹಿಡಿಯಿರಿ.

8) r' ತ್ರಿಜ್ಯವಿರುವ ತ್ರಿಜ್ಯಾಂತರ ಖಂಡಯ ವಿಸ್ತೀರ್ಣವು $231\ cm_2$ ಹಾಗೂ ಕಂಸದ ಉದ್ದವು 22 cm ಗಳಾಗಿವೆ. ತ್ರಿಜ್ಯಾಂತರ ಖಂಡದ ತ್ರಿಜ್ಯ ಮತ್ತು ಕೋನ 'θ' ದ ಬೆಲೆಗಳನ್ನು ಕಂಡುಹಿಡಿಯಿರಿ.

*****************

# ಅಧ್ಯಾಯ – 12

## ಮೇಲ್ಮೈ ವಿಸ್ತೀರ್ಣಗಳು ಮತ್ತು ಘನಫಲಗಳು

ಸೂತ್ರಗಳು

| ಆಕೃತಿಯ ಹೆಸರು | ವಕ್ರ ಮೇಲ್ಮೈ ವಿಸ್ತೀರ್ಣ | ಪೂರ್ಣ ಮೇಲ್ಮೈ ವಿಸ್ತೀರ್ಣ | ಘನಫಲ |
|---|---|---|---|
| ಆಯತ ಘನ | A = 2h(l + b) | A = 2(lb+bh+hl) | V = lbh |
| ಘನ | $A = 4a^2$ | $A = 6a^2$ | $V = a^3$ |
| ಸಿಲಿಂಡರ್ | A = 2πrh | A = 2πr(r+h) | $V = \pi r^2 h$ |
| ಶಂಕು | A = πrl | A = πr(r+l) | $V = \frac{1}{3}\pi r^2 h$ |
| ಗೋಳ | $A = 4\pi r^2$ | $A = 4\pi r^2$ | $V = \frac{4}{3}\pi r^3$ |
| ಅರ್ಧಗೋಳ | $A = 2\pi r^2$ | $A = 3\pi r^2$ | $V = \frac{2}{3}\pi r^3$ |

## ಬಹು ಆಯ್ಕೆ ಪ್ರಶ್ನೆಗಳು

1) ಒಂದು ಶಂಕುವಿನ ತ್ರಿಜ್ಯ (r), ಎತ್ತರ (h) ಮತ್ತು ಓರೆಎತ್ತರ (l) ಆದರೆ ಅದರ ಪಾರ್ಶ್ವ ಮೇಲ್ಮೈ ವಿಸ್ತೀರ್ಣ ಕಂಡುಹಿಡಿಯುವ ಸೂತ್ರವು

A) $\pi rl$ B) 2π(r + l) C) $2\pi r(r + h)$ D) $\frac{1}{3}\pi r^2 h$

2) ಒಂದು ಸಿಲಿಂಡರಿನ ಪಾದದ ತ್ರಿಜ್ಯ 'r' cm ಮತ್ತು ಎತ್ತರ 'h' cm ಆದರೆ ಸಿಲಿಂಡರಿನ ವಕ್ರಮೇಲ್ಮೈ ವಿಸ್ತೀರ್ಣವು

A) 2πr(r+h) $cm^2$ B) πr2h $cm^3$ C) ) $\frac{1}{3}\pi r^2 h$ $cm^3$ D) 2πrh $cm^2$

3) ಒಂದು ಸಿಲಿಂಡರಿನ ಪಾದದ ತ್ರಿಜ್ಯ 'r' ಮತ್ತು ಎತ್ತರ 'h' ಆಗಿರುವ ಸಿಲಿಂಡರಿನ ಪೂರ್ಣ ಮೇಲ್ಮೈವಿಸ್ತೀರ್ಣವು,

A) πr(r+h) B) 2πrh C) 2πr(r – h) D) 2πr(r + h)

4) ಪಾದದ ತ್ರಿಜ್ಯವು 'r' ಮತ್ತು ಎತ್ತರವು 'h' ಆಗಿರುವ ಒಂದು ಘನ ಸಿಲಿಂಡರಿನ ಘನಫಲವನ್ನು ಕಂಡುಹಿಡಿಯುವ ಸೂತ್ರವು

A) $V = \pi r^2$ B) $V= \pi r^2 h$ C) V = πrl D) $V = \frac{1}{3}\pi r^2 h$

5) ಶಂಕುವೊಂದರ ಇಳಿಜಾರು ಎತ್ತರ 'l' ಎತ್ತರ 'h' ಮತ್ತು ಪಾದದ ತ್ರಿಜ್ಯ 'r' ಆದರೆ ಇವುಗಳ ನಡುವಿನ ಸಂಬಂಧವು

A) $l^2 = h^2 - r^2$ B) $l^2 = h^2 + r^2$ C) $h^2 = l^2 + r^2$ D) $l = \sqrt{h^2 - r^2}$

6) ತ್ರಿಜ್ಯವು 'r' ಮಾನಗಳಾಗಿರುವ ಒಂದು ಘನ ಅರ್ಧ ಗೋಳದ ಪಾರ್ಶ್ವ ಮೇಲ್ಮೈ ವಿಸ್ತೀರ್ಣವು.

A) $4\pi r^2$ ಚ.ಮಾನಗಳು B) $3\pi r^2$ ಚ.ಮಾನಗಳು C) $\pi r^2$ ಚ.ಮಾನಗಳು D) $2\pi r^2$ ಚ.ಮಾನಗಳು

7) 'r' ಮಾನ ತ್ರಿಜ್ಯವನ್ನು ಹೊಂದಿರುವ ಗೋಳದ ಮೇಲ್ಮೈ ವಿಸ್ತೀರ್ಣ.

A) $\pi r^2$ ಚದರ ಮಾನಗಳು B) $2\pi r^2$ ಚದರ ಮಾನಗಳು C) $3\pi r^2$ ಚದರ ಮಾನಗಳು D) $4\pi r^2$ ಚದರ ಮಾನಗಳು

8) ತ್ರಿಜ್ಯ 'r' ಮಾನ ಆಗಿರುವ ಒಂದು ಗೋಳದ ಘನಫಲವು.

A) $\frac{4}{3}\pi r^3$ ಘನಮಾನಗಳು B) $\frac{2}{3}\pi r^3$ ಘನಮಾನಗಳು C) $\frac{1}{3}\pi r^3$ ಘನಮಾನಗಳು D) $\frac{4}{3}\pi r^2$ ಘನಮಾನಗಳು

9) ಒಂದೇ ತ್ರಿಜ್ಯವಿರುವ ಎರಡು ಘನ ಅರ್ಧಗೋಳಗಳನ್ನು ಸೇರಿಸಲಾಗಿದೆ. ಆಗ ಉಂಟಾಗುವ ಹೊಸ ಘನಾಕೃತಿಯ ಮೇಲ್ಮೈ ವಿಸ್ತೀರ್ಣವು

A) $4\pi r^2$ B) $2\pi r^2 + 2\pi R$ C) $2\pi r^2$ D) $\frac{4}{3}\pi r^3$

## ಒಂದು ಅಂಕದ ಪ್ರಶ್ನೆಗಳು :

1) ಒಂದು ಗೋಳದ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

2) ತ್ರಿಜ್ಯ 'r' ಮಾನಗಳು ಮತ್ತು ಓರೆ ಎತ್ತರ 'l' ಮಾನಗಳು ಇರುವ ಶಂಕುವಿನ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

3) ನೇರ ಸಿಲಿಂಡರಿನ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡು ಹಿಡಿಯುವ ಸೂತ್ರವನ್ನು ಬರೆಯಿರಿ.

4) ಘನ ಗೋಳದ ಗಾತ್ರವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

5) ಶಂಕುವಿನ ಓರೆ ಎತ್ತರ (l), ಎತ್ತರ (h) ಮತ್ತು ತ್ರಿಜ್ಯ (r) ನಡುವಿನ ಗಣಿತೀಯ ಸಂಬಂಧವನ್ನುಬರೆಯಿರಿ.

6) ಶಂಕುವಿನ ಘನಫಲವನ್ನು ಕಂಡುಹಿಡಿಯುವ ಸೂತ್ರವನ್ನು ಕಂಡುಹಿಡಿಯಿರಿ.

7) ತ್ರಿಜ್ಯ 'r' ಮಾನಗಳಿರುವ, ಘನ ಅರ್ಧಗೋಳದ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯುವ ಸೂತ್ರವನ್ನು ಬರೆಯಿರಿ.

8) ಒಂದು ಘನದ ಘನಫಲವು 64 cm3, ಆದರೆ ಘನದ ಒಂದು ಅಂಚಿನ ಉದ್ದವನ್ನು ಕಂಡುಹಿಡಿಯಿರಿ

9) 7cm ತ್ರಿಜ್ಯವಿರುವ ಗೋಳದ ಮೇಲ್ಮೈ ವಿಸ್ತೀರ್ಣವನ್ನ ಕಂಡುಹಿಡಿಯಿರಿ.

11) ಒಂದು ಆಯತ ಘನಾಕೃತಿ ಆಕಾರದ ಕಬ್ಬಿಣದ ತುಂಡಿನ ಆಯಾಮಗಳು 10cmx5cmx2cm ಆದರೆ ಅದರ ಘನಫಲವನ್ನು ಕಂಡುಹಿಡಿಯಿರಿ.

12) ಒಂದು ಶಂಕುವಿನ ಪಾದದ ತ್ರಿಜ್ಯ ಹಾಗೂ ಅದರ ಇಳಿಜಾರು ಎತ್ತರಗಳು ಕ್ರಮವಾಗಿ 21 ಸೆಂ.ಮೀ ಮತ್ತು 35 ಸೆಂ.ಮೀ.ಗಳಾದರೆ ಅದರ ಎತ್ತರವನ್ನು ಕಂಡುಹಿಡಿಯಿರಿ.

13) ಪಾದದ ತ್ರಿಜ್ಯ ಹಾಗೂ ಎತ್ತರಗಳು ಸಮವಾಗಿರುವ ಸಿಲಿಂಡರ್ ಮತ್ತು ಶಂಕುಗಳಲ್ಲಿ ಸಿಲಿಂಡರಿನ ಘನಫಲವು 27 ಘನಮಾನಗಳಾದರೆ, ಶಂಕುವಿನ ಘನಫಲವನ್ನು ಕಂಡುಹಿಡಿಯಿರಿ.

## ಎರಡು ಅಂಕದ ಪ್ರಶ್ನೆಗಳು :

1) ಒಂದು ಘನದ ಘಲಫಲವು $64cm^3$ ಇದೆ. ಈ ಘನದ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

2) 64 $cm^3$ ಘನಫಲವನ್ನು ಹೊಂದಿರುವ ಎರಡು ವರ್ಗ ಘನಗಳ ಮುಖಗಳನ್ನು ಸೇರಿಸಿ ಒಂದು ಆಯತ ಘನಾಕೃತಿ ಮಾಡಿದೆ. ಈ ಆಯತ ಘನಾಕೃತಿಯ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

3) 9 ಸೆಂ.ಮೀ. ತ್ರಿಜ್ಯವುಳ್ಳ ಲೋಹದ ಗೋಳವನ್ನು ಕರಗಿಸಿ ಅದನ್ನು 6 ಸೆಂ.ಮೀ. ತ್ರಿಜ್ಯವಿರುವ ಸಿಲಿಂಡರಿನ ಆಕಾರದಲ್ಲಿ ಮರುರೂಪ ನೀಡಲಾಗಿದೆ. ಹಾಗಾದರೆ ಸಿಲಿಂಡರಿನ ಎತ್ತರವನ್ನು ಕಂಡುಹಿಡಿಯಿರಿ.

4) ಒಂದು ಸಿಲಿಂಡರಿನ ಪಾದದ ಪರಿಧಿಯು 132cm ಮತ್ತು ಅದರ ಎತ್ತರ 25cm ಆದಾಗ ಸಿಲಿಂಡರಿನ ಘನಫಲವನ್ನು ಕಂಡು ಹಿಡಿಯಿರಿ ?

5) ಒಂದು ನೇರ ವೃತ್ತಪಾದ ಸಿಲಿಂಡರಿನ ಪಾರ್ಶ್ವ ಮೇಲ್ಮೈ ವಿಸ್ತೀರ್ಣವು 440cm2 ಮತ್ತು ಅದರ ವೃತ್ತ ಪಾದದ ತ್ರಿಜ್ಯವು 7cm ಆಗಿದೆ. ಹಾಗಾದರೆ ಸಿಲಿಂಡರಿನ ಘನಫ ಲವನ್ನು ಕಂಡುಹಿಡಿಯಿರಿ

6) 8 ಸೆಂ.ಮೀ ಉದ್ದ ಮತ್ತು 1 ಸೆಂ.ಮೀ ದಪ್ಪವಿರುವ ಒಂದು ಸಿಲಿಂಡರ್ ಆಕಾರದ ತಂತಿಯನ್ನು ಸಮನಾದ ದಪ್ಪವಿರುವ 18 ಮೀಟರ್ ಉದ್ದದ ಅದೇ ಆಕೃತಿಯ ತಂತಿಯನ್ನಾಗಿ ಬದಲಾಯಿಸಲಾಗಿದೆ. ಹಾಗಾದರೆ ದೊರೆತ ತಂತಿಯ ದಪ್ಪವನ್ನು ಕಂಡುಹಿಡಿಯಿರಿ.

## ಮೂರು ಅಂಕದ ಪ್ರಶ್ನೆಗಳು :

1) ಪಾದದ ತ್ರಿಜ್ಯ 5cm ಮತ್ತು 20cm ಎತ್ತರವಿರುವ ಒಂದು ವೃತ್ತಾಕಾರದ ಲೋಹದ ಶಂಕುವನ್ನು ಕರಗಿಸಿ ಅದನ್ನು ಘನಗೋಳವನ್ನಾಗಿ ಪರಿವರ್ತಿಸಲಾಗಿದೆ. ಹಾಗಾದರೆ ಪರಿವರ್ತಿಸಲಾದ ಗೋಳದ ತ್ರಿಜ್ಯವನ್ನು ಕಂಡು ಹಿಡಿಯಿರಿ.

2) 3cm ತ್ರಿಜ್ಯವಿರುವ ಘನಗೋಳವನ್ನು ಕರಗಿಸಿ 9m ಉದ್ದದ ಒಂದು ಸಿಲಿಂಡರಿನಾಕಾರದ ತಂತಿಯನ್ನಾಗಿ ಪರಿವರ್ತಿಸಲಾಗಿದೆ. ಹಾಗಾದರೆ ದೊರೆತ ತಂತಿಯ ತ್ರಿಜ್ಯವನ್ನು ಕಂಡುಹಿಡಿಯಿರಿ.

3) ಒಂದು ನೇರ ವೃತ್ತೀ ಯ ಘನ ಸಿಲಿಂಡರಿನ ಘನಫಲವು $2156\ cm^3$ ಆಗಿದೆ. ಸಿಲಿಂಡರಿನ ಎತ್ತರ 14 cm ಆದರೆ, ಅದರ ವಕ್ರಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

## ನಾಲ್ಕು ಅಂಕದ ಪ್ರಶ್ನೆಗಳು :

1) ಒಂದು ನೇರ ವೃತ್ತಿಯ ಘನ ಸಿಲಿಂಡರಿನ ಘನಫಲವು 2156 $cm^3$ ಆಗಿದೆ. ಸಿಲಿಂಡರ್ ನ ಎತ್ತರ 14 cm ಆದರೆ ಅದರ ವಕ್ರ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ. [ Take $\pi = \frac{22}{7}$ ]

2) ಚಿತ್ರದಲ್ಲಿ ತೋರಿಸಿರುವಂತೆ ಸಿಲಿಂಡರಿನ ಎರಡು ಬದಿಗಳಲ್ಲಿ ಸಮತ್ರಿಜ್ಯವಿರುವ ಅರ್ಧಗೋಳಗಳನ್ನು ಜೋಡಿಸಿರುವ ಆಕಾರದಲ್ಲಿ ಒಂದು ಹಾಲಿನ ಟ್ಯಾಂಕನ್ನು ನಿರ್ಮಿಸಲಾಗಿದೆ. ಈ ಟ್ಯಾಂಕ್ ನ ಒಟ್ಟು ಎತ್ತರ 6 ಮೀಟರ್ ಮತ್ತು ತ್ರಿಜ್ಯ 1 ಮೀಟರ್ ಆಗಿದ್ದರೆ, ಈ ಟ್ಯಾಂಕ್ ನಲ್ಲಿ ತುಂಬಬಹುದಾದ ಹಾಲಿನ ಗರಿಷ್ಠ ಪ್ರಮಾಣವನ್ನು ಲೀಟರ್ ಗಳಲ್ಲಿ ಕಂಡುಹಿಡಿಯಿರಿ. ( $\pi = \frac{22}{7}$ )




3) ತ್ರಿಜ್ಯವು 14 ಸೆಂಟಿಮೀಟರ್ ಇರುವ ಒಂದು ಅರ್ಧ ಗೋಳಾಕೃತಿಯ ಪಾತ್ರೆಯಲ್ಲಿ ಸಂಪೂರ್ಣವಾಗಿ ಮರಳನ್ನು ತುಂಬಿದೆ. ಈ ಮರಳನ್ನು ಸಮತಟ್ಟಾದ ನೆಲದ ಮೇಲೆ ಸುರಿದಾಗ ಆ ಮರಳಿನ ರಾಶಿಯು ಶಂಕುವಿನ ಆಕೃತಿಯಾಗುತ್ತದೆ. ಈ ಶಂಕು ಆಕೃತಿಯ ಮರಳಿನ ರಾಶಿಯ ಎತ್ತರವು 7 ಸೆಂಟಿಮೀಟರ್ ಆದಾಗ ಶಂಕುವಿನ ವೃತ್ತ ಪಾದವು ನೆಲದ ಮೇಲೆ ಎಷ್ಟು ವಿಸ್ತೀರ್ಣವನ್ನು ಆಕ್ರಮಿಸಿಕೊಳ್ಳುತ್ತದೆ ಎಂಬುದನ್ನು ಕಂಡುಹಿಡಿಯಿರಿ.

4) ತ್ರಿಜ್ಯವು 14 ಸೆಂ.ಮೀ ಇರುವ ಒಂದು ಅರ್ಧಗೋಳಾಕೃತಿಯ ಪಾತ್ರೆಯಲ್ಲಿ ಪೂರ್ಣವಾಗಿ ಮರಳನ್ನು ತುಂಬಿದೆ. ಈ ಮರಳನ್ನು ಸಮತಟ್ಟಾದ ನೆಲದ ಮೇಲೆ ಸುರಿದಾಗ ಆ ಮರಳಿನ ರಾಶಿಯು ಶಂಕುವಿನ ಶಂಕುವಿನ ಆಕೃತಿಯಾಗುತ್ತದೆ. ಈ ಶಂಕು ಆಕೃತಿಯ ಮರಳಿನ ರಾಶಿಯ ಎತ್ತರವು 7 ಸೆಂ.ಮೀ. ಆದಾಗ ಶಂಕುವಿನ ವೃತ್ತ ಪಾದವು ನೆಲದ ಮೇಲಿನ ಎಷ್ಟು ವಿಸ್ತೀರ್ಣವನ್ನು ಆಕ್ರಮಿಸಿಕೊಳ್ಳುತದ್ತೆ ಎಂಬುದನ್ನು ಕಂಡುಹಿಡಿಯಿರಿ.

5) ಒಂದು ಔಷಧ ಕ್ಯಾಪ್ಸುಲ್‌ನ ಆಕಾರವು ಒಂದು ಸಿಲಿಂಡರಿನ ಪ್ರತಿಪಾದಗಳಲ್ಲಿ ಒಂದೊಂದು ಅರ್ಧಗೋಳವನ್ನು ಅಂಟಿಸಿ ಮಾಡಿದೆ. ಕ್ಯಾಪ್ಸುಲ್ ನ ಸಂಪೂರ್ಣ ಉದ್ದವು 14 ಮಿ.ಮೀ. ಮತ್ತು ಅದರ ವ್ಯಾಸವು 5 ಮಿ.ಮೀ. ಅದರ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

6) ಪಾದದ ತ್ರಿಜ್ಯ 18cm ಮತ್ತು ಎತ್ತರ 32 cm ಇರುವ ಒಂದು ಸಿಲಿಂಡರಿನಾಕಾರದ ಪಾತ್ರೆಯಲ್ಲಿ ಪೂರ್ಣವಾಗಿ ಮರಳನ್ನು ತುಂಬಿದೆ. ಪಾತ್ರೆಯಲ್ಲಿರುವ ಮರಳನ್ನು ಪೂರ್ತಿಯಾಗಿ ನೆಲದ ಮೇಲೆ ಸುರಿದಾಗ ಅದು ಶಂಕುವಿನಾಕಾರದ ಮರಳಿನ ರಾಶಿಯನ್ನು ಉಂಟುಮಾಡಿದೆ. ಶಂಕುವಿನಾಕಾರದ ರಾಶಿಯ ಎತ್ತರವು 24cm ಆದಾಗ ಶಂಕುವಿನಾಕಾರದ ಮರಳಿನ ರಾಶಿಯ ಪಾದದ ತ್ರಿಜ್ಯ ಮತ್ತು ಓರೆ ಎತ್ತರವನ್ನು ಕಂಡುಹಿಡಿಯಿರಿ.

4) ಒಂದು ಸಿಲಿಂಡರ್ ನ ಘನಫಲವು ಒಂದು ಶಂಕುವಿನ ಘನಫಲದ 5ರಷ್ಟಕ್ಕೆ ಸಮನಾಗಿದೆ. ಶಂಕುವಿನ ಪಾದದ ತ್ರಿಜ್ಯ ಮತ್ತು ಓರೆ ಎತ್ತರಗಳು ಕ್ರಮವಾಗಿ 7 cm ಮತ್ತು 25 cm ಆಗಿದೆ. ಸಿಲಿಂಡರ್ ನ ವೃತ್ತ ಪಾದದ ತ್ರಿಜ್ಯವು 14 cm ಆದರೆ ಆ ಸಿಲಿಂಡರ್ ನ ಘನಫಲ ಮತ್ತು ಪಾರ್ಶ್ವ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

5) ಲೋಹದ ಹಾಳೆಯಿಂದ ತಯಾರಿಸಿದ ಒಂದು ನೇರ ಸಿಲಿಂಡರ್ ಆಕೃತಿಯ ಪಾತ್ರೆಯ ತಳಭಾಗವನ್ನು ಚಿತ್ರದಲ್ಲಿ ತೋರಿಸಿರುವಂತೆ ಒಂದು ಶಂಕು ಆಕೃತಿಯ ಲೋಹದ ಪಾತ್ರೆಯಿಂದ ಸಂಪೂರ್ಣವಾಗಿ ಮುಚ್ಚಲಾಗಿದೆ. ಸಿಲಿಂಡರ್ ನ ವೃತ್ತಪಾದದ ತ್ರಿಜ್ಯ ಮತ್ತು ಶಂಕುವಿನ ವೃತ್ತಪಾದ ತ್ರಿಜ್ಯ 2 cm ಗೆ ಸಮನಾಗಿದೆ. ಸಿಲಿಂಡರ್ ನ ಎತ್ತರ 20 cm ಮತ್ತು ಶಂಕುವಿನ ಎತ್ತರ 3 cm ಆಗಿದೆ. ಈ ಪಾತ್ರೆಯಲ್ಲಿ ಸಂಪೂರ್ಣವಾಗಿ ಹಾಲನ್ನು ತುಂಬಲು ಒಂದು ಲೀಟರ್ ಹಾಲಿಗೆ ರೂ.20ರಂತೆ ಎಷ್ಟು ಹಣ ಬೇಕಾಗುತ್ತದೆ ಎಂದು ಕಂಡುಹಿಡಿಯಿರಿ.




6) ಒಂದು ಔಷಧ ಕ್ಯಾಪ್ಸುಲ್ ನ ಆಕಾರವು ಒಂದು ಸಿಲಿಂಡರಿನ ಪ್ರತಿಪಾದಗಳಲ್ಲಿ ಒಂದೊಂದು ಅರ್ಧಗೋಳವನ್ನು ಅಂಟಿಸಿ ಮಾಡಿದೆ. ಕ್ಯಾಪ್ಸುಲ್ ನ ಸಂಪೂರ್ಣ ಉದ್ದವು 14 mm ಮತ್ತು ಅದರ ವ್ಯಾಸವು 5 mm ಆಗಿದೆ. ಅದರ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.




7) ಒಂದು ಅರ್ಧ ಗೋಳದ ಮೇಲೆ ಅದೇ ತ್ರಿಜ್ಯವನ್ನು ಹೊಂದಿರುವ ಒಂದು ಶಂಕುವನ್ನು ಕೂಡಿಸಿ ಒಂದು ಆಟಿಕೆಯನ್ನು ಚಿತ್ರದಲ್ಲಿ ತೋರಿಸಿದಂತೆ ಮಾಡಿದೆ. ಅವೆರಡರ ವೃತ್ತಾಕಾರದ ಪಾದದ ತ್ರಿಜ್ಯವು 21cm ಆಗಿದೆ. ಆಟಿಕೆಯ ಒಟ್ಟು ಎತ್ತರವು 49cm ಆಗಿದೆ. ಆಟಿಕೆಯ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.



8) ಅರ್ಧಗೋಳಾಕಾರದ ವೃತ್ತ ಪಾದದ ಮೇಲೆ ಒಂದು ಶಂಖುವನ್ನು ಜೋಡಿಸಿ ಚಿತ್ರದಲ್ಲಿ ತೋರಿಸಿರುವಂತೆ ಒಂದು ಮರದ ಘನ ಆಟಿಕೆಯನ್ನು ತಯಾರಿಸಲಾಗಿದೆ ಶಂಕುವಿನ ಪಾದದ ವಿಸ್ತೀರ್ಣವು 38·5 $cm^2$ ಮತ್ತು ಆಟಿಕೆಯ ಒಟ್ಟು ಎತ್ತರ 15.5cm ಆದರೆ, ಆಟಿಕೆಯ ಪೂರ್ಣ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ ಹಾಗೂ ಘನಫಲವನ್ನು ಕಂಡುಹಿಡಿಯಿರಿ.




9) ಸಿಲಿಂಡರ್ ನ ಮೇಲೆ ಶಂಕುವನ್ನು ಕೂರಿಸಿ ಘನಾಕೃತಿಯನ್ನು ರಚಿಸಿದೆ. ಸಿಲಿಂಡರ್ ಮತ್ತು ಶಂಕುವಿನ ತ್ರಿಜ್ಯ 5cm ಆಗಿದೆ. ಸಿಲಿಂಡರ್ ನ ಎತ್ತರ 11cm ಮತ್ತು ಘನಾಕೃತಿಯ ಒಟ್ಟು ಎತ್ತರ 23cm ಆಗಿದೆ. ಹಾಗಾದರೆ ಆ ಘನಾಕೃತಿಯ ವಕ್ರಮೇಲ್ಮೈ ವಿಸ್ತೀರ್ಣ ಮತ್ತು ಘನಫಲವನ್ನು ಕಂಡುಹಿಡಿಯಿರಿ.



**ಐದು ಅಂಕದ ಪ್ರಶ್ನೆಗಳು :**

1) ಒಂದು ಘನ ಸಿಲಿಂಡರಿನ ಮೇಲೆ ಒಂದು ಘನಗೋಳವನ್ನು ಕೂರಿಸಿ ಚಿತ್ರದಲ್ಲಿರುವಂತೆ ಒಂದು ಲೋಹದ ನೆನಪಿನ ಕಾಣಿಕೆಯನ್ನು ತಯಾರಿಸಬೇಕಾಗಿದೆ. ಸಿಲಿಂಡರ್‌ನ ತ್ರಿಜ್ಯ 6cm ಮತ್ತು ಎತ್ತರ 14cm ಹಾಗೂ ಗೋಳದ ತ್ರಿಜ್ಯ 2.1cm ಇರುವಂತೆ ಈ ನೆನಪಿನ ಕಾಣಿಕೆಯನ್ನು ತಯಾರಿಸಲು ಬೇಕಾಗುವ ಲೋಹದ ಪರಿಮಾಣವನ್ನು ಕಂಡು ಹಿಡಿಯಿರಿ ಹಾಗೂ ಗೋಳದ ಮೇಲ್ಮೈಗೆ ಚಿನ್ನದ ಬಣ್ಣವನ್ನು ಹಚ್ಚಲು ಪ್ರತಿ ಚದರ ಸೆಂಟಿಮೀಟರ್‌ಗೆ 10 ಪೈಸೆಯಂತೆ, ತಗಲುವ ವೆಚ್ಚವನ್ನು ಕಂಡುಹಿಡಿಯಿರಿ.

2) ಒಂದು ಪ್ರನಾಳವನ್ನು ಚಿತ್ರದಲ್ಲಿ ತೋರಿಸಿರುವಂತೆ ಒಂದು ಸಿಲಿಂಡರ್ ಮತ್ತು ಅರ್ಧಗೋಳದಿಂದ ಮಾಡಲಾಗಿದೆ. ಅರ್ಧಗೋಳದ ವ್ಯಾಸ 3.5 cm ಮತ್ತು ಪ್ರನಾಳದ ಎತ್ತರ 17.5 cm ಆದರೆ, ಪ್ರನಾಳದ ವಕ್ರ ಮೇಲ್ಮೈ ವಿಸ್ತೀರ್ಣ ಮತ್ತು ಅರ್ಧಗೋಳಾಕಾರದ ಭಾಗದಲ್ಲಿ ಸಂಪೂರ್ಣವಾಗಿ ತುಂಬಬಹುದಾದ ದ್ರಾವಣದ ಪ್ರಮಾಣವನ್ನು ಕಂಡುಹಿಡಿಯಿರಿ.

3) ಒಂದು ಸಿಲಿಂಡರಿನ ಘನಫಲವು ಒಂದು ಶಂಕುವಿನ ಘನಫಲದ 5 ರಷ್ಟಕ್ಕೆ ಸಮವಾಗಿದೆ. ಶಂಕುವಿನ ಪಾದದ ತ್ರಿಜ್ಯ ಮತ್ತು ಓರೆ ಎತ್ತರಗಳು ಕ್ರಮವಾಗಿ 7 cm ಮತ್ತು 25 cm ಆಗಿದೆ. ಸಿಲಿಂಡರಿನ ವೃತ್ತಪಾದದ ತ್ರಿಜ್ಯವು 14 cm ಆದರೆ, ಆ ಸಿಲಿಂಡರಿನ ಘನಫಲ ಮತ್ತು ಪಾರ್ಶ್ವ ಮೇಲ್ಮೈ ವಿಸ್ತೀರ್ಣವನ್ನು ಕಂಡುಹಿಡಿಯಿರಿ.

*****************

# ಸಂಖ್ಯಾಶಾಸ್ತ್ರ

## ಸರಾಸರಿ

1) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 10 – 20 | 20 – 30 | 30 – 40 | 40 – 50 | 50 – 60 |
|---|---|---|---|---|---|
| ಆವೃತ್ತಿ | 2 | 3 | 5 | 7 | 3 |

2) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 1 – 5 | 6 – 10 | 11 – 15 | 16 – 20 | 21 – 25 |
|---|---|---|---|---|---|
| ಆವೃತ್ತಿ | 4 | 3 | 2 | 1 | 5 |

3) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 2 – 6 | 7 – 11 | 12 – 16 | 17 – 21 | 22 – 26 |
|---|---|---|---|---|---|
| ಆವೃತ್ತಿ | 2 | 4 | 5 | 3 | 1 |

4) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 1 - 3 | 3 - 5 | 5 - 7 | 7 - 9 | 9 - 11 |
|---|---|---|---|---|---|
| ಆವೃತ್ತಿ | 7 | 8 | 2 | 2 | 1 |

5) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 5 –15 | 15 – 25 | 25 – 35 | 35 – 45 | 45 – 55 |
|---|---|---|---|---|---|
| ಆವೃತ್ತಿ | 1 | 3 | 5 | 4 | 2 |

6) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 5 –15 | 15 – 25 | 25 – 35 | 35 – 45 | 45 – 55 |
|---|---|---|---|---|---|
| ಆವೃತ್ತಿ | 4 | 6 | 5 | 6 | 4 |

7) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 10 –20 | 20 – 30 | 30 – 40 | 40 – 50 | 50 – 60 |
|---|---|---|---|---|---|
| ಆವೃತ್ತಿ | 4 | 6 | 5 | 6 | 4 |

8) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಸರಾಸರಿ ಕಂಡುಹಿಡಿಯಿರಿ.

| ವರ್ಗಾಂತರ | 10 –20 | 20 – 30 | 30 – 40 | 40 – 50 | 50 – 60 |
|---|---|---|---|---|---|
| ಆವೃತ್ತಿ | 2 | 5 | 6 | 5 | 2 |

ಬಹುಲಕ

1) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 10 –25 | 25 – 40 | 40 – 55 | 55 – 70 | 70 – 85 |
|---|---|---|---|---|---|
| ಆವೃತ್ತಿ | 2 | 3 | 7 | 6 | 6 |

2) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 1 – 3 | 3 – 5 | 5 – 7 | 7 – 9 | 9 – 11 |
|---|---|---|---|---|---|
| ಆವೃತ್ತಿ | 6 | 9 | 15 | 9 | 1 |

3) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 5 –15 | 15 – 25 | 25 – 35 | 35 – 45 | 45 – 55 |
|---|---|---|---|---|---|
| ಆವೃತ್ತಿ | 3 | 4 | 8 | 7 | 3 |

4) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 1 – 5 | 5 – 9 | 9 – 13 | 13 – 17 | 17 – 21 |
|---|---|---|---|---|---|
| ಆವೃತ್ತಿ | 1 | 3 | 7 | 10 | 9 |

5) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 0 – 5 | 5 – 10 | 10 – 15 | 15 – 20 | 20 – 25 |
|---|---|---|---|---|---|
| ಆವೃತ್ತಿ | 8 | 9 | 5 | 3 | 1 |

6) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 10 – 15 | 15 – 20 | 20 – 25 | 25 – 30 | 30 – 35 |
|---|---|---|---|---|---|
| ಆವೃತ್ತಿ | 3 | 3 | 7 | 6 | 6 |

7) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 0 – 5 | 5 – 10 | 10 – 15 | 15 – 20 | 20 – 25 |
|---|---|---|---|---|---|
| ಆವೃತ್ತಿ | 4 | 10 | 6 | 4 | 5 |

8) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಬಹುಲಕ ಕಂಡುಹಿಡಿಯಿರಿ.

| ವರ್ಗಾಂತರ | 1 – 4 | 4 – 7 | 7 – 10 | 10 – 13 | 13 – 16 | 16 – 19 |
|---|---|---|---|---|---|---|
| ಆವೃತ್ತಿ | 6 | 30 | 40 | 16 | 4 | 4 |

## ಮಧ್ಯಾಂಕ

1) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಮಧ್ಯಾಂಕ ಕಂಡುಹಿಡಿಯಿರಿ.

| ವರ್ಗಾಂತರ | 20 – 40 | 40 – 60 | 60 – 80 | 80 – 100 |
|---|---|---|---|---|
| ಆವೃತ್ತಿ | 7 | 15 | 20 | 8 |

2) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಮಧ್ಯಾಂಕ ಕಂಡುಹಿಡಿಯಿರಿ.

| ವರ್ಗಾಂತರ | 15 – 20 | 20 – 25 | 25 – 30 | 30 – 35 | 35 – 40 |
|---|---|---|---|---|---|
| ಆವೃತ್ತಿ | 2 | 3 | 6 | 4 | 5 |

3) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಮಧ್ಯಾಂಕ ಕಂಡುಹಿಡಿಯಿರಿ.

| ವರ್ಗಾಂತರ | 0 – 20 | 20 – 40 | 40 – 60 | 60 – 80 | 80 – 100 |
|---|---|---|---|---|---|
| ಆವೃತ್ತಿ | 6 | 9 | 10 | 8 | 7 |

4) ಈ ಕೆಳಗಿನ ಆವೃತ್ತಿ ವಿತರಣಾ ಕೋಷ್ಟಕಕ್ಕೆ ಮಧ್ಯಾಂಕ ಕಂಡುಹಿಡಿಯಿರಿ.

| ವರ್ಗಾಂತರ | 50 – 60 | 60 – 70 | 70 – 80 | 80 – 90 | 90 – 100 |
|---|---|---|---|---|---|
| ಆವೃತ್ತಿ | 5 | 8 | 10 | 4 | 3 |

## ಸಂಭವನೀಯತೆ

### ಒಂದು ಅಂಕದ ಪ್ರಶ್ನೆಗಳು

1) ಒಂದು ಘಟನೆಗೆ $P(A) = 0.05$ ಆದರೆ $P(\bar{A})$ ಯ ಬೆಲೆ ಕಂಡಹುಹಿಡಿಯಿರಿ.

2) ಒಂದು ಘಟನೆಗೆ $P(A) = 0.75$ ಆದರೆ $P(\bar{A})$ ಯ ಬೆಲೆ ಕಂಡಹುಹಿಡಿಯಿರಿ.

3) $P(A) = \frac{2}{3}$ ಆದರೆ $P(\bar{A})$ ಯ ಬೆಲೆ ಕಂಡಹುಹಿಡಿಯಿರಿ.

4) ಒಂದು ಆಟದಲ್ಲಿ ಗೆಲ್ಲುವ ಸಂಭವನೀಯತೆಯು $\frac{3}{4}$ , ಆದರೆ ಅದೇ ಆಟದಲ್ಲಿ ಸೋಲುವ ಸಂಭವನೀಯತೆಯನ್ನು ಬರೆಯಿರಿ.

5) ಒಂದು ಖಚಿತ ಘಟನೆಯ ಸಂಭವನೀಯತೆಯ ಬೆಲೆ ಎಷ್ಟು?

6) ಒಂದು ದಾಳವನ್ನು ಎರಡು ಸಲ ಉರುಳಿಸಿದಾಗ ಬರುವ ಒಟ್ಟು ಫಲಿತಗಳ ಸಂಖ್ಯೆ ಎಷ್ಟು?

7) ಒಂದರಿಂದ ಆರರವರೆಗಿನ ಸಂಖ್ಯೆಗಳನ್ನು ಹೊಂದಿರುವ ಒಂದು ಘನಾಕೃತಿಯ ದಾಳವನ್ನು ಒಂದು ಬಾರಿ ಉರುಳಿಸಿದಾಗ ಬೆಸ ಸಂಖ್ಯೆ ಮೇಲೆ ಬರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

### 2/3 ಅಂಕದ ಪ್ರಶ್ನೆಗಳು

1) ಮುಖಗಳ ಮೇಲೆ 1 ರಿಂದ 6 ಸಂಖ್ಯೆಗಳನ್ನು ಬರೆದಿರುವ ಒಂದು ಘನಾಕೃತಿಯ ದಾಳವನ್ನು ಎರಡು ಬಾರಿ ಉರುಳಿಸಲಾಗಿದೆ. ಹಾಗಾದರೆ ಮುಖಗಳ ಮೇಲಿನ ಸಂಖ್ಯೆಗಳ ಮೊತ್ತ 10 ಬರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

2) ಒಂದು ಪೆಟ್ಟಿಗೆಯಲ್ಲಿ 9 ರಿಂದ 19 ರವರೆಗಿನ ಸಂಖ್ಯೆಗಳನ್ನು ನಮೂದಿಸಿರುವ ಕಾರ್ಡುಗಳಿವೆ. ಪೆಟ್ಟಿಗೆಯಿಂದ ಯಾದೃಚಿಕವಾಗಿ ಒಂದು ಕಾರ್ಡನ್ನು ಹೊರ ತೆಗೆದಾಗ, ಅದು ಒಂದು ಅವಿಭಾಜ್ಯ ಸಂಖ್ಯೆಯಾಗಿರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

3) ಒಂದು ಪೆಟ್ಟಿಗೆಯಲ್ಲಿ 1 ರಿಂದ 90 ರವರೆಗಿನ ಸಂಖ್ಯೆಗಳನ್ನು ನಮೂದಿಸಿರುವ 90 ಬಿಲ್ಲೆಗಳಿವೆ. ಪೆಟ್ಟಿಗೆಯಿಂದ ಒಂದು ಬಿಲ್ಲೆಯನ್ನು ಯಾದೃಚಿಕವಾಗಿ ತೆಗೆದರೆ ಅದು ಒಂದು ಪೂರ್ಣವರ್ಗ ಸಂಖ್ಯೆ ಆಗಿರುವ ಸಂಭವನೀಯತೆಯನ್ನು ಕಂಡು ಹಿಡಿಯಿರಿ.

4) ಒಂದು ಪೆಟ್ಟಿಗೆಯಲ್ಲಿ 10 ರಿಂದ 18 ರ ವರೆಗಿನ ಸಂಖ್ಯೆಗಳು ನಮೂದಾಗಿರುವ 9 ಕಾರ್ಡ್ ಗಳನ್ನು ಹಾಕಲಾಗಿದೆ. ಈ ಪೆಟ್ಟಿಗೆಯಿಂದ ಒಂದು ಕಾರ್ಡನ್ನು ಯಾದೃಚಿಕವಾಗಿ ತೆಗೆದಾಗ ಅವಿಭಾಜ್ಯ ಸಂಖ್ಯೆಯನ್ನು ಪಡೆಯುವ ಸಂಭವನೀಯತೆಯನ್ನು ಕಂಡು ಹಿಡಿಯಿರಿ.

5) ಒಂದು ಚೀಲದಲ್ಲಿ 2, 4, 8, 16, 32, 64, 128 ಮತ್ತು 256 ಸಂಖ್ಯೆಗಳನ್ನು ಬರೆದಿರುವ ಕಾರ್ಡ್ ಗಳಿವೆ. ಯಾದೃಚ್ಛಿಕವಾಗಿ ಚೀಲದಿಂದ ಒಂದು ಕಾರ್ಡನ್ನು ತೆಗೆದಾಗ ಅದು ಪೂರ್ಣ ಘನ ಸಂಖ್ಯೆ ಆಗಿರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

6) ಒಂದು ಅವಕಾಶದ ಆಟದಲ್ಲಿ ಒಂದು ಸೂಚಕವು ಚಕ್ರಾಕಾರವಾಗಿ ತಿರುಗಿ 1, 2, 3, 4, 5, 6, 7, 8 ಈ ಅಕ್ಷರಗಳಲ್ಲಿ ಯಾವುದಾದರೂ ಒಂದು ಅಂಕಿಯನ್ನು ಸೂಚಿಸುವಂತೆ ನಿಶ್ಚಲವಾಗುತ್ತದೆ. ಮತ್ತು ಇವೆಲ್ಲವೂ ಸಮಾನ ಸಾಧ್ಯತೆಗಳನ್ನು ಹೊಂದಿವೆ , ಸೂಚಕವನ್ನು ಸೂಚಿಸುವ ಸಂಖ್ಯೆ ಒಂದು ಬೆಸ ಸಂಖ್ಯೆ ಆಗಿರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.




7) ಇಂಗ್ಲಿಷ್ ವರ್ಣಮಾಲೆಯ ಅಕ್ಷರಗಳಿಂದ | A | B | C | D | E | I | ಗಳನ್ನು ಒಂದು ಘನಾಕೃತಿಯ ದಾಳದ ಮುಖಗಳ ಮೇಲೆ ಗುರುತಿಸಿದೆ. ಈ ದಾಳವನ್ನು ಒಂದು ಬಾರಿ ಉರುಳಿಸಿದಾಗ ಮೇಲೆ ಬರುವ ಮುಖದಲ್ಲಿ ಸ್ವರಾಕ್ಷರ ಬರುವ ಸಂಭವನೀಯತೆಯನ್ನು ಕಂಡುಹಿಡಿಯಿರಿ.

8) ಈ ಕೆಳಗಿನವುಗಳಲ್ಲಿ ಅಸಂಭವ ಘಟನೆಯನ್ನು ಗುರುತಿಸಿ ಅದರ ಸಂಭವನೀಯತೆಯನ್ನು ಬರೆಯಿರಿ.
ಘಟನೆ A : ಎರಡು ನಾಣ್ಯಗಳನ್ನು ಒಂದು ಬಾರಿ ಚಿಮ್ಮಿದಾಗ ಶಿರ ಮತ್ತು ಪುಚ್ಛ ಎರಡು ಬರುವುದು.
ಘಟನೆ B : ಎರಡು ನಾಣ್ಯಗಳನ್ನು ಒಂದು ಬಾರಿ ಚಿಮ್ಮಿದಾಗ ಶಿರ ಅಥವಾ ಪುಚ್ಛ ಬರುವುದು.

9) ಒಂದು ಚೀಲದಲ್ಲಿ 3 ಕೆಂಪು ಚೆಂಡುಗಳು 5 ಬಿಳಿ ಚೆಂಡುಗಳು ಮತ್ತು 8 ನೀಲಿ ಚೆಂಡುಗಳಿವೆ. ಚೀಲದಿಂದ ಯಾದೃಚಿಕವಾಗಿ ಒಂದು ಚೆಂಡನ್ನು ಹೊರ ತೆಗೆಯಲಾಗಿದೆ.
a) ಆ ಚೆಂಡು ಒಂದು ಕೆಂಪು ಚೆಂಡು ಆಗಿರುವ b) ಬಿಳಿ ಚೆಂಡು ಆಗಿರದ ಸಂಭವನೀಯತೆಯನ್ನು ಕಂಡುಹಿಡಿಯಿರಿ.

10) ಒಂದು ಬುಟ್ಟಿಯಲ್ಲಿ 36 ಮಾವಿನ ಹಣ್ಣುಗಳಿವೆ. ಅವುಗಳ $\frac{1}{4}$ ಭಾಗದಷ್ಟು ಹಣ್ಣುಗಳು ಕೊಳೆತಿವೆ ಮತ್ತು ಉಳಿದವು ಚೆನ್ನಾಗಿದೆ. ಒಂದು ಮಾವಿನ ಹಣ್ಣನ್ನು ಹೊರ ತೆಗೆದಾಗ ಅದು ಚೆನ್ನಾಗಿರುವ ಸಂಭವನೀಯತೆಯನ್ನು ಕಂಡು ಹಿಡಿಯಿರಿ.

****************